

# 17ನೇ ವರ್ಷದ
# ವಾರ್ಷಿಕ ಸೇವಾ ವರದಿ
# 2020-21

SEVA BHARATHI
सेवा ही परमो धर्मः

# ಸೇವಾಭಾರತಿ (ರಿ.)

ಪ್ರಧಾನ ಕಛೇರಿ : ಸೇವಾನಿಕೇತನ, ಕನ್ಯಾಡಿ
ಧರ್ಮಸ್ಥಳ ಗ್ರಾಮ -574 216
ದೂರವಾಣಿ ಸಂಖ್ಯೆ: 9945491241
Web site: www.sevaabharathi.org
E-mail:sevabharathikanyady@gmail.com

ತೆರೆದ-ಅಂಚೆ

ರಿಗೆ,
ಶ್ರೀಮತಿ/ ಶ್ರೀ



# ಅಧ್ಯಕ್ಷರ ನುಡಿ

ಆತ್ಮೀಯರೇ ನಮಸ್ಕಾರಗಳು,

ವ್ಯಕ್ತಿ ಮತ್ತು ಸಮಾಜದ ನಡುವೆ ಕಟ್ಟುತ್ತಿರುವ ಸೇತುವೆಗೆ 17ವರ್ಷ ತುಂಬಿ 18ನೇ ವರ್ಷಕ್ಕೆ ಕಾಲಿಡುವ ಈ ಸುಸಂದರ್ಭದಲ್ಲಿ ನಮ್ಮ ಸಂಸ್ಥೆಯ ಸ್ಪಷ್ಟ ಹೆಜ್ಜೆಗಳ ಬಗ್ಗೆ ತಿಳಿಸಲು ಸಂತೋಷವಾಗುತ್ತಿದೆ. ಸಾಮಾಜಿಕ ದೌರ್ಬಲ್ಯ ಮತ್ತು ಕೊರತೆಗಳನ್ನು ನಿವಾರಿಸುವ ಚಿಕ್ಕಪುಟ್ಟ ಕಾರ್ಯಗಳೇ ಸೇವೆ ಅನಿಸಲ್ಪಡುತ್ತದೆ. ಆದರೂ ಶಾರೀರಿಕ ಮತ್ತು ಮಾನಸಿಕ ಅಂಗವೈಕಲ್ಯ ಕ್ಷೇತ್ರಗಳು ಕಡೆಗಣಿಸಲ್ಪಟ್ಟಷ್ಟು ಯಾವ ಕ್ಷೇತ್ರವೂ ಕಡೆಗಣಿಸಲ್ಪಡುತ್ತಿಲ್ಲ ಎಂದರೂ ತಪ್ಪಾಗಲಿಕ್ಕಿಲ್ಲ. ಆದರೂ ಬೆನ್ನುಮೂಳೆ ಮುರಿತವು ಒಂದು ದೀರ್ಘಾವಧಿ ಮತ್ತು ಜೀವನ ನಿರ್ವಹಣೆ ವೆಚ್ಚ ಅಧಿಕವಾಗಿರುವ ಒಂದು ವಿಧವಾಗಿದೆ. 2018 ರಿಂದ ಈಗಿನ ತನಕ ನಾವು ಸೇವಾಧಾಮ ಪುನಃಶ್ಚೇತನ ಕೇಂದ್ರ ನಿರ್ವಹಣೆ ಮಾಡುತ್ತಾ ಬರುತ್ತಿದ್ದು ಈ ಕಾಲಘಟ್ಟವು ಸುಲಭದ ಹೆಜ್ಜೆಗಳು ಆಗಿರಲಿಲ್ಲ. ಕಾಲಕಾಲಕ್ಕೆ ಸಹೃದಯಿ ಧನದಾನಿಗಳ ಸಂಸ್ಥೆಗಳ, ಜನಪ್ರತಿನಿಧಿಗಳ, ಅನೇಕ ಕಾರ್ಯಕರ್ತರ ಶ್ರಮದ ಫಲವಾಗಿ ಈ ಕ್ಷೇತ್ರವು ತುಸು ಸುಧಾರಿಸಿಕೊಂಡಿದೆ. ಅಲ್ಲದೆ ಸಿಬ್ಬಂದಿಗಳ ಅವಿರತ ಮಾನವೀಯ ಸೇವೆಗಳು ಉಲ್ಲೇಖನೀಯ ಸಂಗತಿ. ಧ್ವನಿ ಫೌಂಡೇಶನ್ ಬೆಂಗಳೂರು ಸಂಸ್ಥೆಯಿಂದ ನಾವು ಸ್ಪಷ್ಟ ಮತ್ತು ನಿರಂತರಯತ್ತ ಸಾಗುತ್ತಿದ್ದೇವೆ. ಎಲ್.ಐ.ಸಿ. ಗೋಲ್ಡನ್ ಜುಬಿಲಿ ಫೌಂಡೇಶನ್ ಇವರ ಸೋಲಾರ್ ಘಟಕದ ಸಹಾಯ ಹಸ್ತ ನಮ್ಮನ್ನು ವಿದ್ಯುತ್ ಕ್ಷೇತ್ರದಲ್ಲಿ ಸ್ವಾವಲಂಬಿಯನ್ನಾಗಿಸಿದೆ. ಎ.ಸಿ.ಇ. ಮ್ಯಾನಿಫ್ಯಾಕ್ಚರಿಂಗ್ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು, ಇವರು ನಮಗೆ ಒದಗಿಸಿದ ಸಹಾಯಹಸ್ತಕ್ಕೆ ನಾವು ಚಿರಋಣಿಗಳು. ಪ್ರಾರಂಭದ ದಿನಗಳಿಂದ ಈಗಿನ ತನಕವೂ ನಮ್ಮ ಹಿರಿಯಣ್ಣನಂತೆ ಬೆನ್ನ ಹಿಂದಿರುವುದು ಬೆಂಗಳೂರು ಎ.ಪಿ.ಡಿ. ಸಂಸ್ಥೆಗೆ ನಾವು ಚಿರಋಣಿಗಳು. ಸೆಲ್ಕೋ ಫೌಂಡೇಶನ್ ನಮ್ಮೊಂದಿಗಿರುವುದು ಧನ್ಯತೆ ತಂದಿರುತ್ತದೆ.

ಜಗತ್ತಿಗೆ ಬಾಧಿಸಿದ ಕೊರೊನಾದಿಂದ ಮೈ ಕೊಡವಿ ಎದ್ದೇಳುತ್ತಿದ್ದೇವೆ. ತಮ್ಮೆಲ್ಲರ ಸಹಾಯಹಸ್ತ ಮತ್ತು ವಿಶ್ವಾಸಗಳ ಕಾರಣಗಳಿಂದ ಮೊದಲಿನಂತಲ್ಲದಿದ್ದರೂ ಆಮೆ ನಡಿಗೆಗೆ ಸಾಧ್ಯವಾಗಿರುವುದು ಅಭಿಮಾನದ ಸಂಗತಿ. ಇನ್ನು ಉಚಿತ ಟೈಲರಿಂಗ್ ತರಬೇತಿಗಳು ಪ್ರಸ್ತುತ ಪುನರ್ ಆರಂಭಗೊಂಡಿದ್ದು ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆಂಬುಲೆನ್ಸ್ ಸೇವೆಗಳು ಹಳಿಗೆ ಬಂದಿರುತ್ತವೆ. ಒಟ್ಟಿನಲ್ಲಿ ಸಮಾಜ ಶಕ್ತಿಯುತವಾಗಬೇಕು. ಹಾಗಾಗಬೇಕಾದಲ್ಲಿ ಪ್ರತಿ ವ್ಯಕ್ತಿ ಶಕ್ತಿವಂತನಾಗಬೇಕು. ಆ ನಿಟ್ಟಿನಲ್ಲಿ ನಮ್ಮ ಸೇವೆಗಳು ಅನುಷ್ಠಾನವಾಗುತ್ತದೆ. 'ಸೇವಾ ಹಿ ಪರಮೊ ಧರ್ಮಃ' ಎನ್ನುವ ಉಕ್ತಿ ಸಾರ್ಥಕವಾಗುತ್ತದೆ. ಮೊದಲಿನಂತೆಯೇ ತಮ್ಮ ಸಹಕಾರವಿರಲಿ ಎಂದು ಆಶಿಸುವ,

ಇಂತೀ ತಮ್ಮವ...

**ಕೆ. ವಿನಾಯಕ ರಾವ್**

SEVA BHARATHI
सेवा ही परमो धर्मः

# ಸೇವಾಭಾರತಿ (ರಿ.), ಬೆಳ್ತಂಗಡಿ ತಾಲೂಕು

## ಪ್ರಧಾನ ಕಾರ್ಯಾಲಯ : ಸೇವಾನಿಕೇತನ, ಕನ್ಯಾಡಿ-॥, ಬೆಳ್ತಂಗಡಿ

ನಮ್ಮ ಸಂಸ್ಥೆಯ

## 17ನೇ ವರ್ಷದ ಸಂಭ್ರಮ (2020-21)

### ಮತ್ತು ಸೇವಾಕಾರ್ಯಗಳ ಹಸ್ತಾಂತರ

**ದಿನಾಂಕ : 25-02-2022, ಶುಕ್ರವಾರ, ಸಾಯಂಕಾಲ 5 ಗಂಟೆಗೆ । ಸ್ಥಳ : ಶಾಲಾ ಸಭಾಭವನ, ಹಿರಿಯ ಪ್ರಾಥಮಿಕ ಶಾಲೆ, ಕನ್ಯಾಡಿ-॥**

**ಉದ್ಘಾಟಕರು** : **ಡಾ। ಈಶ್ವರ ಕೀರ್ತಿ ಸಿ.**, Consultant Spine Surgeon KMC Hospital, Jyothi. Secretary of Canara Spine Forum, Mangaluru

**ಅಧ್ಯಕ್ಷರು** : **ಶ್ರೀ ಕೆ. ವಿನಾಯಕ ರಾವ್**, ಅಧ್ಯಕ್ಷರು, ಸೇವಾಭಾರತಿ (ರಿ.), ಬೆಳ್ತಂಗಡಿ ತಾಲೂಕು

**ಸೇವೆಗಳ ಹಸ್ತಾಂತರ** : **ಡಾ. ಎನ್. ಎಸ್. ಸೆಂಥಿಲ್ ಕುಮಾರ್** Ph.D., COO & ED, APD, ಬೆಂಗಳೂರು
**ರೊ. ಶರತ್‌ಕೃಷ್ಣ ಪಡ್ವೆಟ್ನಾಯ**, ಅಧ್ಯಕ್ಷರು, ರೋಟರಿ ಕ್ಲಬ್, ಬೆಳ್ತಂಗಡಿ
**ಶ್ರೀ ಗುರುಪ್ರಕಾಶ್ ಶೆಟ್ಟಿ**, DGM, SELCO Ltd., ಉಡುಪಿ
**ಶ್ರೀ ಕೆ. ಕೃಷ್ಣ ಭಟ್**, ಅಧ್ಯಕ್ಷರು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.), ಕೊಕ್ಕಡ
**ಡಾ. ಸಂದೀಪ್ ಪಿ.ಎಚ್.**, BPT,MPT, (PhD)Assistant Professor, HOD Department of Community Physiotherapy, JSS College of Physiotherapy, Mysuru
**ಶ್ರೀ ಕೆ. ನಂದ ಭಟ್**, ಅಧ್ಯಕ್ಷರು, ಶಾಲಾಭಿವೃದ್ಧಿ & ಮೇಲುಸ್ತುವಾರಿ ಸಮಿತಿ, ಕನ್ಯಾಡಿ-॥

**ಗೌರವ ಉಪಸ್ಥಿತಿ** : **ಶ್ರೀ ಕೆ. ಪುರಂದರ ರಾವ್**, ಸಂಚಾಲಕರು, ಸೇವಾಧಾಮ ಪುನಃಶ್ಚೇತನ ಕೇಂದ್ರ, ಸೌತಡ್ಕ
**ರೊ. ಶ್ರೀಧರ ಕೆ.ವಿ.**, ರಕ್ತನಿಧಿ ವಿಭಾಗ, ಸೇವಾಭಾರತಿ
**ಶ್ರೀಮತಿ ಶಾಂತ ಪಿ. ಶೆಟ್ಟಿ**, ಅಧ್ಯಕ್ಷರು, ಶ್ರೀ ದುರ್ಗಾ ಮಾತೃಮಂಡಳಿ, ಕನ್ಯಾಡಿ-॥

ಸೇವಾಕಾರ್ಯಗಳು
ಗಾಲಿಕುರ್ಚಿಗಳ ವಿತರಣೆ, ಶೌಚಾಲಯ ಮತ್ತು ರ್‍ಯಾಂಪ್‌ಗಳಿಗೆ ಧನಸಹಾಯ,
ಸ್ವಉದ್ಯೋಗಕ್ಕೆ ಸಹಾಯಹಸ್ತ, ಔಷಧಿ ಕಿಟ್‌ಗಳು, **Air Bed, Water Bed**ಗಳ ಕೊಡುಗೆ.

ಒಡಂಬಡಿಕೆ ಪತ್ರ ವಿನಿಮಯ
ಸೇವಾಭಾರತಿಯೊಂದಿಗೆ ಪುನಃಶ್ಚೇತನ ಕೇಂದ್ರ ಹಾಗೂ ಸಮುದಾಯ ಆಧಾರಿತ ವಿಸ್ತರಿತ ಸೇವೆಗಳಿಗೆ
**JSS College of Physiotherapy**, ಮೈಸೂರು ಇವರೊಂದಿಗೆ ಒಡಂಬಡಿಕೆ

### ಆಶ್ಲೇಷ ಬಲಿ ಮತ್ತು ದುರ್ಗಾಪೂಜೆ

**ಸಮಯ : 7-30ಕ್ಕೆ ಮಹಾಮಂಗಳಾರತಿ । ಸ್ಥಳ : ಸೇವಾನಿಕೇತನ, ಕನ್ಯಾಡಿ-॥**

ತಮ್ಮೆಲ್ಲರನ್ನೂ ಹಾರ್ದಿಕವಾಗಿ ಸ್ವಾಗತಿಸುವ

| | | | |
|---|---|---|---|
| ಗಿರೀಶ್ ರಾವ್ ಕೆ. ಯು. | ಸ್ವರ್ಣಗೌರಿ | ಬಿ. ಕೃಷ್ಣಪ್ಪ ಗುಡಿಗಾರ್ | ಕೆ. ವಿನಾಯಕ ರಾವ್ |
| ಉಪಾಧ್ಯಕ್ಷರು | ಕಾರ್ಯದರ್ಶಿ | ಖಜಾಂಚಿ | ಅಧ್ಯಕ್ಷರು |

ಹಾಗೂ ಸಲಹಾ ಮಂಡಳಿ ಮತ್ತು ವಿಭಾಗಗಳ ಸರ್ವ ಸದಸ್ಯರು
ಹಾಗೂ ಸಂಸ್ಥೆಯ ಪೋಷಕರ ಸವಿನಯ ಆಮಂತ್ರಣ

## ಪದಾಧಿಕಾರಿಗಳು 2020–21

| ಕ್ರ.ಸಂ. | ಹೆಸರು | ಹುದ್ದೆ | ಸಂಪರ್ಕ ಸಂಖ್ಯೆ |
|---|---|---|---|
| 1. | ಶ್ರೀ ಕೆ. ವಿನಾಯಕ ರಾವ್ | ಅಧ್ಯಕ್ಷರು | 9844092350 |
| 2. | ಶ್ರೀ ಕೆ. ಯು. ಗಿರೀಶ್ ರಾವ್ | ಉಪಾಧ್ಯಕ್ಷರು | 9845220411 |
| 3. | ಶ್ರೀಮತಿ ಸ್ವರ್ಣಗೌರಿ | ಕಾರ್ಯದರ್ಶಿ | 9449334114 |
| 4. | ಶ್ರೀ ಬಿ. ಕೃಷ್ಣಪ್ಪ ಗುಡಿಗಾರ್ | ಖಜಾಂಚಿ | 9980881812 |
| 5. | ಶ್ರೀ ರಜತ್ ಕುಮಾರ್ ಜೆ. ಡಿ. | ಟ್ರಸ್ಟಿ | 9611004241 |

## ಸೇವಾಧಾಮದ ಪ್ರಮುಖರು

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1. | ಶ್ರೀ ಕೆ. ಪುರಂದರ ರಾವ್ | ಸಂಚಾಲಕರು | 9880468649 |
| 2. | ಡಾ. ಮುರಳೀಧರ್ ನಾಯಕ್ | ನಿರ್ದೇಶಕರು | 9880447350 |
| 3. | ಶ್ರೀ ರಾಯನ್ ಫೆರ್ನಾಂಡೀಸ್ | ನಿರ್ದೇಶಕರು | 9535621217 |
| 4. | ಶ್ರೀ ವಿಜಯ ಕೊಡವೂರು | ನಿರ್ದೇಶಕರು | 9844613195 |
| 5. | ಶ್ರೀ ಬಾಲಕೃಷ್ಣ | ಮಾರ್ಗದರ್ಶಿ | 9480036333 |

## ಆರೋಗ್ಯಮ್

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1. | ಶ್ರೀ ಶ್ರೀಧರ್ ಕೆ. ವಿ. | ಅಧ್ಯಕ್ಷರು | 8971897193 |
| 2. | ಶ್ರೀ ನವೀನ್ ಕುಮಾರ್ ಕನ್ಯಾಡಿ | ಕಾರ್ಯದರ್ಶಿ | 9743308682 |

## ಸಬಲಿನಿ

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ |
|---|---|---|---|
| 1. | ಶ್ರೀಮತಿ ಶಾಂತ ಪಿ. ಶೆಟ್ಟಿ | ಅಧ್ಯಕ್ಷರು | 9945427542 |
| 2. | ಪೂರ್ಣಿಮಾ | ಕಾರ್ಯದರ್ಶಿ | 9008001727 |

## ಸಿಬ್ಬಂದಿ ವರ್ಗ

| ಕ್ರ.ಸಂ. | ಹೆಸರು | ಹುದ್ದೆ | ಸಂಪರ್ಕ ಸಂಖ್ಯೆ |
|---|---|---|---|
| 1. | ಶ್ರೀ ಮೋಹನ್ ಎಸ್. | ಕಾರ್ಯಾಲಯ ಪ್ರಬಂಧಕರು | 9945491241 |
| 2. | ಶ್ರೀ ಅಖಿಲೇಶ್ ಎ. | ಕಾರ್ಯಕ್ರಮ ಸಂಯೋಜಕರು | 9606044891 |
| 3. | ಶ್ರೀ ಚರಣ್ ಕುಮಾರ್ ಎಂ. | ಸಂಪನ್ಮೂಲ ಸಂಗ್ರಹಣ ಪ್ರಬಂಧಕರು | 9606044892 |
| 4. | ಶ್ರೀ ಆಶ್ರಿತ್ ಸಿ. ಪಿ. | ಮೇಲ್ವಿಚಾರಕರು | 9448254888 |
| 5. | ಶ್ರೀ ಅದಿನ್ ಡೇವಿಡ್ | ಫಿಸಿಯೋಥೆರಪಿಸ್ಟ್ | 9606044890 |
| 6. | ಶ್ರೀ ಧನೇಂದ್ರ | ಥೆರಪಿಸ್ಟ್ | 9606044894 |
| 7. | ಶ್ರೀ ಮನು ಆರ್. | ಕ್ಷೇತ್ರ ಸಂಯೋಜಕರು | 9606044893 |
| 8. | ಶ್ರೀ ಸತೀಶ್ | ಅಡುಗೆ ತಯಾರಕರು | 9483997066 |
| 9. | ಶ್ರೀಮತಿ ರಾಜೀವಿ | ಸ್ವಚ್ಛತೆ | |

## ಸೇವಾಭಾರತಿ ಸಲಹಾ ಸಮಿತಿ ಸದಸ್ಯರುಗಳು

| ಕ್ರ.ಸಂ. | ಹೆಸರು | ಸಂಪರ್ಕ ಸಂಖ್ಯೆ |
|---|---|---|
| 1. | ಶ್ರೀ ಕೆ. ಪ್ರತಾಪಸಿಂಹ ನಾಯಕ್ | 9448466237 |
| 2. | ಶ್ರೀ ಗುಜ್ಜಾಡಿ ಪ್ರಭಾಕರ ನಾಯಕ್ | 9845010220 |
| 3. | ಶ್ರೀಮತಿ ಮನೋರಮಾ ಭಟ್ | 9448770501 |
| 4. | ಶ್ರೀಮತಿ ಡಾ. ದೀಪಾಲಿ ಡೋಂಗ್ರೆ | 9448437952 |
| 5. | ಶ್ರೀ ಕೆ. ರಾಘವೇಂದ್ರ ನಾಯಕ್, ಬರ್ಗುಳ | 9481023990 |
| 6. | ಶ್ರೀ ಹರೀಶ್ ಟಿ. ಪಿ. | 9243199905 |
| 7. | ಶ್ರೀ ಗೋಪಾಲಕೃಷ್ಣಯ್ಯ ವಿಜಯಪುರಿ | 9900520024 |

## ಮಕ್ಕಳ ರಕ್ಷಣಾ ನೀತಿ

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ ಮತ್ತು ಇ–ಮೇಲ್ |
|---|---|---|---|
| 1. | ಶ್ರೀಮತಿ ಮನೋರಮ ಭಟ್ | ಅಧ್ಯಕ್ಷರು | 9945491241 cppsevabharathi@gmail.com |
| 2. | ಶ್ರೀಮತಿ ವಿಜಯ | ಸದಸ್ಯರು | |
| 3. | ಶ್ರೀಮತಿ ಪೂರ್ಣಿಮ | ಸದಸ್ಯರು | |
| 4. | ಶ್ರೀ ಕೃಷ್ಣಪ್ಪ ಗುಡಿಗಾರ್ | ಸದಸ್ಯರು | |
| 5. | ಶ್ರೀ ಮೋಹನ್ ಎಸ್. | ಸದಸ್ಯರು | |

## ಲೈಂಗಿಕ ಕಿರುಕುಳ ತಡೆಗಟ್ಟುವಿಕೆ ಸಮಿತಿ

| ಕ್ರ.ಸಂ. | ಹೆಸರು | ಜವಾಬ್ದಾರಿ | ಸಂಪರ್ಕ ಸಂಖ್ಯೆ ಮತ್ತು ಇ–ಮೇಲ್ |
|---|---|---|---|
| 1. | ಶ್ರೀಮತಿ ವಸಂತಿ | ಅಧ್ಯಕ್ಷರು | 9945491241 poshsevabharathi@gmail.com |
| 2. | ಶ್ರೀಮತಿ ಡಾ. ದೀಪಾಲಿ ಡೊಂಗ್ರೆ | ಸದಸ್ಯರು | |
| 3. | ಶ್ರೀಮತಿ ಶಾಂತ ಪಿ. ಶೆಟ್ಟಿ | ಸದಸ್ಯರು | |
| 4. | ಶ್ರೀಮತಿ ಸ್ವರ್ಣಗೌರಿ | ಸದಸ್ಯರು | |
| 5. | ಶ್ರೀಮತಿ ರಾಜೀವಿ | ಸದಸ್ಯರು | |

# ಸೇವಾಭಾರತಿ (ರಿ.) ಬೆಳ್ತಂಗಡಿ ತಾ॥ ಗ್ರಾಮ ಸಂಯೋಜಕರ ವಿವರ

| ಕ್ರ. ಸ. | ಗ್ರಾಮ ಪಂಚಾಯತ್ | ಸಂಯೋಜಕರು | ಸಂಪರ್ಕ ಸಂಖ್ಯೆ |
|---|---|---|---|
| 1. | ನೆರಿಯಾ | ಚಿದಾನಂದ ಕೆ. ಆರ್. | 9611923952 |
| 2. | ಧರ್ಮಸ್ಥಳ | ಪುರುಷೋತ್ತಮ ಪೂಜಾರಿ | 9448724635 |
| 3. | ಪಟ್ರಮೆ | ಜಿನ್ನಪ್ಪ ಗೌಡ | 9483564714 |
| 4. | ಕೊಕ್ಕಡ | ಮೋಹನ ಗೌಡ | 9449566501 |
| 5. | ಶಿಬಾಜೆ | ಗಿರೀಶ್ ಭಟ್ ಬಿ. | 9480300272 |
| 6. | ಶಿಶಿಲ | ಸೂರ್ಯನಾರಾಯಣ ರಾವ್ | 8762281125 |
| 7. | ಹತ್ಯಡ್ಕ | ಸುಬ್ರಹ್ಮಣ್ಯ ಡಿ. | 9483139824 |
| 8. | ಕಳೆಂಜ | ಅಶೋಕ ಗೌಡ | 9739790285 |
| 9. | ನಿಡ್ಲೆ | ಕೆ. ರಾಮಚಂದ್ರ ರಾವ್ | 9741752122 |
| 10. | ಪುದುವೆಟ್ಟು | ಗಣೇಶ್ | 9902508977 |
| 11. | ರೆಖ್ಯಾ | ಪ್ರಕಾಶ ಎಂಜಿರ | 9449902721 |
| 12. | ಬೆಳಾಲು | ಯಶವಂತ ಬಿ. ಡಿ. | 9902338898 |
| 13. | ಕಲ್ಮಂಜ | ರಾಜಶೇಖರ ಹೆಬ್ಬಾರ್ | 9731412725 |
| 14. | ಮುಂಡಾಜೆ | ನಾರಾಯಣ ಫಡ್ಕೆ | 9632303163 |
| | | ಎನ್. ಎಸ್. ಗೋಖಲೆ | 9448624556 |
| 15. | ಚಾರ್ಮಾಡಿ | ಹರೀಶ್ ರಾವ್ | 9480146723 |
| 16. | ತೋಟತ್ತಾಡಿ | ಜನಾರ್ಧನ ಗೌಡ | 9880294755 |
| 17. | ಚಿಬಿದ್ರೆ | ಗೋಪಾಲಕೃಷ್ಣ ಭಟ್ | 9611728884 |
| 18. | ಕಡಿರುದ್ಯಾವರ | ವಿನಾಯಕ ಪ್ರಭು | 9449467737 |
| 19. | ಮಿತ್ತಬಾಗಿಲು | ಶಿವಾನಂದ ರಾವ್ | 9481266707 |
| 20. | ಮಲವಂತಿಗೆ | ಡಿ. ದಿನೇಶ್ | 9880183173 |

| | | | |
|---|---|---|---|
| 21. | ಉಜಿರೆ | ಗೋಪಾಲಕೃಷ್ಣ ಜಿ. ಕೆ. | 9449389869 |
| 22. | ಕನ್ಯಾಡಿ । | ಜಯ ಶೆಟ್ಟಿ | 9632550673 |
| 23. | ನಡ | ಅಜಿತ್ ಕುಮಾರ್ ಆರಿಗ | 9972990442 |
| 24. | ಲ್ಯಾಲ | ಗಿರೀಶ್ ಡೋಂಗ್ರೆ | 9449386004 |
| 25. | ಇಂದಬೆಟ್ಟು | ಆನಂದ ಹಡೀಲು | 9740734728 |
| 26. | ನಾವೂರು | ಹರೀಶ್ ಬಂಗೇರ | 8971144502 |
| 27. | ಬಂದಾರು | ಉದಯಕುಮಾರ್ ಬಿ. ಕೆ. | 9972725301 |
| 28. | ಪುತ್ತಿಲ | ಗಣೇಶ್ ಪಿ. | 9740936607 |
| 29. | ತಣ್ಣೀರುಪಂತ | ಶಿವರಾಮ ಶೆಟ್ಟಿಗಾರ್ | 9741636158 |
| 30. | ಕಣಿಯೂರು | ಪುರಂದರ ಶೆಟ್ಟಿ | 9482110371 |
| 31. | ತೆಕ್ಕಾರು | ಗಿರಿಧರ ನಾಯಕ್ | 9480289522 |
| 32. | ಉರುವಾಲು | ಸೀತಾರಾಮ ಆಳ್ವ | 9448061006 |
| 33. | ಮಚ್ಚಿನ | ಪದ್ಮನಾಭ ಸಾಲ್ಯಾನ್ | 9481225736 |
| 34. | ಬಡಕೋಡಿ | ಸೇಸಪ್ಪ ನಾಯ್ಕ | 9611874540 |
| 35. | ಮೂಡುಕೋಡಿ | ಹರೀಶ್ ಪಿ. ಎಸ್. | 9480571959 |
| 36. | ಬಜಿರೆ | ಶ್ರೀಮತಿ ಹೇಮಾ | 9448203205 |
| 37. | ಕರಿಮಣೇಲು | ಕೃಷ್ಣಪ್ಪ | 9449467718 |
| 38. | ವೇಣೂರು | ನೇಮಣ್ಣ | 9449210373 |
| 39. | ಹೊಸಂಗಡಿ | ಸುನೀಲ್ ಶೆಟ್ಟಿ | 9535617848 |
| 40. | ಮರೋಡಿ | ಜಯರಾಮ | 9741461784 |
| | | ಯಶೋಧರ ಬಂಗೇರ ಪಿ. | 7090834744 |
| 41. | ಅರಂಬೋಡಿ | ಪ್ರಣೀತ್ | 9611815441 |
| | | ಸತೀಶ ಮಠ ಪಿ. | 990110205 |
| 42. | ಪೆರಾಡಿ | ಬಾಬಣ್ಣ ಕುಲಾಲ್ | 9449387425 |

| | | | |
|---|---|---|---|
| 43. | ಸಾವ್ಯ | ಹರೀಶ್ ಹೆಗ್ಡೆ | 9483034349 |
| 44. | ಕಾಶಿಪಟ್ಣ | ನಿತೇಶ್ ಸಾಲಿಯಾನ್ | 9880208745 |
| 45. | ಕರಾಯ | ಜಯರಾಮ ಆಚಾರ್ಯ | 9945192966 |
| 46. | ಅಂಡಿಂಜೆ | ರಾಘವನ್ ಪುತ್ರನ್ | 9448251431 |
| 47. | ಮೊಗ್ರು | ಪುರಂಧರ ಎನ್. | 9483907157 |
| 48. | ಮಾಲಾಡಿ | ಅಶೋಕ ಕುರಿಯಾಡಿ | 9535221888 |
| 49. | ಒಡಿಲ್ನಾಳ | ತಾರಾನಾಥ | 9535343218 |
| 50. | ಗುಂಡೂರಿ | ನವೀನ್ ಪಚ್ಚೇರಿ | 9632222517 |
| 51. | ಕೊಕ್ರಾಡಿ | ಮಹೇಶ್ ಭಟ್ | 9480317061 |
| 52. | ನಾರಾವಿ | ಸುಜಲತಾ | 8277529018 |
| 53. | ನಿಟ್ಟಡೆ | ಪ್ರಕಾಶ್ ಪೆರ್ಮುಡ | 9481021054 |
| 54. | ಕುಕ್ಕೇಡಿ | ಅನಿಲ್ ಹೆಗ್ಡೆ | 9480400924 |
| 55. | ಇಳಂತಿಲ | ಜನಾರ್ದನ ಗೌಡ ಅಣಾಜೆ | 9980249676 |
| 56. | ತೆಂಕಕಾರಂದೂರು | ಯೋಗೀಶ್ ಗಿಳಿಕಾಪು | 9663691898 |
| 57. | ಶಿರ್ಲಾಲು | ಭಾಸ್ಕರ್ ಸಾಲ್ಯಾನ್ | 9449565600 |
| 58. | ಬಳಂಜ | ಜಯ ಸಾಲ್ಯಾನ್ | 9449331428 |
| 59. | ಕುತ್ಲೂರು | ರಾಮಚಂದ್ರ ಭಟ್ | 9148063602 |

**ಸೇವಾಭಾರತಿ 2004ರಲ್ಲಿ ಸ್ಥಾಪಿತವಾದ ಸರ್ಕಾರೇತರ ಸಂಸ್ಥೆಯಾಗಿದ್ದು, ಕಳೆದ 17 ವರ್ಷಗಳಿಂದ ಆರೋಗ್ಯ, ಕೃಷಿ, ಶಿಕ್ಷಣ, ಸ್ವ–ಉದ್ಯೋಗದ ಮೂಲಕ ಗ್ರಾಮೀಣ ಮಹಿಳೆಯರ ಸಬಲೀಕರಣ ಮತ್ತು ದಿವ್ಯಾಂಗರ ಕ್ಷೇತ್ರಗಳಲ್ಲಿ ಸಾಮಾಜಿಕ ಸೇವಾಕಾರ್ಯ ಹಾಗೂ ಸಮುದಾಯ ಸೇವೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುತ್ತದೆ.**

## ಸೇವಾಧಾಮ
## ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಪುನಶ್ಚೇತನಕೇಂದ್ರ

ಬೆನ್ನುಮೂಳೆ ಮುರಿತಕ್ಕೊಳಗಾದವರನ್ನು ಗುರುತಿಸಿ, ದ್ವಿತೀಯ ಹಂತದ ತೊಡಕುಗಳನ್ನು ತಡೆಗಟ್ಟಿ, ಅಗತ್ಯ ವೈದ್ಯಕೀಯ ನೆರವನ್ನು ನೀಡಿ ದಿವ್ಯಾಂಗರಲ್ಲಿ ಹಾಗೂ ಕುಟುಂಬದವರಲ್ಲಿ ಆತ್ಮವಿಶ್ವಾಸವನ್ನು ತುಂಬಿಸುವುದು. ಸ್ವಾವಲಂಬಿ ಬದುಕಿಗೆ ಅಗತ್ಯವಾದ ವೃತ್ತಿ ಕೌಶಲ್ಯಗಳನ್ನು ನೀಡಿ, ಚಲನಶೀಲತೆಗಳನ್ನು ಹೆಚ್ಚಿಸುವ ಮೂಲಕ ಸಮಾಜದೊಂದಿಗೆ ಪುನರ್ ಸಂಯೋಜನೆ ಮಾಡುವ ಗುರಿಯನ್ನಿಟ್ಟುಕೊಂಡು ಎ.ಪಿ.ಡಿ. ಬೆಂಗಳೂರು ಮತ್ತು ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಸೌತಡ್ಕ ಇದರ ಸಹಭಾಗಿತ್ವದೊಂದಿಗೆ "ಸೇವಾಧಾಮ" ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಶ್ಚೇತನ ಕೇಂದ್ರವು ದಿನಾಂಕ 16.09.2018ರಂದು ಕೊಕ್ಕಡ ಗ್ರಾಮದ ಸೌತಡ್ಕದಲ್ಲಿ (ಶ್ರೀ ಮಹಾಗಣಪತಿ ದೇವಸ್ಥಾನ ಎದುರುಗಡೆ) ಪ್ರಾರಂಭಗೊಂಡಿದೆ.

ಸೇವಾಧಾಮ ಪುನಶ್ಚೇತನ ಕೇಂದ್ರವು 10 ಬೆಡ್‌ಗಳನ್ನು ಹೊಂದಿದ್ದು, ದಿವ್ಯಾಂಗರು ಎರಡರಿಂದ ಮೂರು ತಿಂಗಳಲ್ಲಿ ಪುನಶ್ಚೇತನಗೊಂಡು ದೈಹಿಕ ಹಾಗೂ ಮಾನಸಿಕವಾಗಿ ಮುಂದಿನ ಜೀವನ ನಡೆಸಲು ಸದೃಢರಾಗಿ ತೆರಳಿದ್ದಾರೆ. ಪ್ರಸ್ತುತ ಪುನಶ್ಚೇತನ ಕೇಂದ್ರದಲ್ಲಿ 8 ಮಂದಿ ದಿವ್ಯಾಂಗರು ಪುನಶ್ಚೇತನಗೊಳ್ಳುತ್ತಿದ್ದಾರೆ. ಈಗಾಗಲೇ 120 ಮಂದಿ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರು ಪುನಶ್ಚೇತನಗೊಂಡು ಸ್ವ–ಉದ್ಯೋಗ ಮಾಡಿಕೊಂಡು ಬೇರೆಯವರಿಗೆ ಮಾದರಿಯಾಗಿದ್ದಾರೆ.

ಸೇವಾಧಾಮವು ದಿನನಿತ್ಯ ಚಟುವಟಿಕೆಗಳ ತರಬೇತಿ, ಫಿಸಿಯೋಥೆರಪಿ, ವೈದ್ಯಕೀಯ ಚಿಕಿತ್ಸೆಗಳು, ಪ್ರಾಣಾಯಾಮ, ಗಾಲಿಕುರ್ಚಿ ತರಬೇತಿ, ಸ್ವಾವಲಂಬಿ ಬದುಕಿಗೆ ವೃತ್ತಿಕೌಶಲ್ಯ ತರಬೇತಿ, ರೆಟ್ರೋಫಿಟ್ಟೆಡ್ ಸ್ಕೂಟರ್ ಚಾಲನಾ ತರಬೇತಿ ಹಾಗೂ ಸೂಕ್ತ ಪರಿಕರಗಳನ್ನು ಸುಸಜ್ಜಿತ ವ್ಯವಸ್ಥೆಯ ಮೂಲಕ ಕಲ್ಪಿಸಿಕೊಡುತ್ತಿದೆ.

## ಸಬಲಿನಿ

ಮಹಿಳಾ ಆರ್ಥಿಕ ಸಬಲೀಕರಣಕ್ಕಾಗಿ ಮಹಿಳೆಯರಿಗಾಗಿ ಶ್ರಮಿಸುವ ಯೋಜನೆಯಾಗಿದ್ದು ಈಗಾಗಲೇ 26 ಉಚಿತ ಟೈಲರಿಂಗ್ ತರಬೇತಿಯ ಮೂಲಕ ಬೆಳ್ತಂಗಡಿ ತಾಲೂಕಿನ ಗ್ರಾಮ ಗ್ರಾಮಗಳಲ್ಲಿ 750ಕ್ಕೂ ಮಿಕ್ಕಿ ಮಹಿಳೆಯರಿಗೆ ತರಬೇತಿ ನೀಡಿರುತ್ತದೆ.

## ಆರೋಗ್ಯಮ್

ತುರ್ತು ರಕ್ತದ ಅವಶ್ಯಕತೆಗಳನ್ನು ಪೂರೈಸಲು ತಾಲೂಕಿನಾದ್ಯಂತ ವಿವಿಧ ಸಂಘಟನೆಗಳ ಸಹಕಾರದಲ್ಲಿ ರಕ್ತದಾನ ಶಿಬಿರಗಳನ್ನು ಆಯೋಜಿಸುವ ಉದ್ದೇಶ ಈ ಯೋಜನೆಯದ್ದು. ಹಾಗೂ ಆಂಬ್ಯುಲೆನ್ಸ್ ಸೇವೆಯನ್ನು ನೀಡುವುದರ ಮೂಲಕ ಸಾಮಾಜಿಕ ಕಾರ್ಯದಲ್ಲಿ ಅನವರತ ಸೇವೆ ಸಲ್ಲಿಸುವ ಗುರಿ ಇದೆ.

17 ವರ್ಷಗಳ ನಿರಂತರ ಸೇವಾಕಾರ್ಯವು 2020–21ನೇ ಸಾಲಿನಲ್ಲಿ ಕೋವಿಡ್ ಸಾಂಕ್ರಾಮಿಕದಿಂದಾಗಿ ಬಹಳಷ್ಟು ಸಂಕಷ್ಟಗಳನ್ನು ಅನುಭವಿಸುವಂತಾಗಿತ್ತು. ಇದು ಸೇವಾಧಾಮದ ಸಂಪನ್ಮೂಲ ಮತ್ತು ಕಾರ್ಯವೈಖರಿಯ ಮೇಲೆ ಪರಿಣಾಮವನ್ನು ಬೀರಿತು. ಕೋವಿಡ್ ಸಾಂಕ್ರಾಮಿಕವು ಸಂಸ್ಥೆಯ ಸುಸ್ಥಿರತೆಗೆ ಸವಾಲಾಗಿದ್ದರೂ ಸೇವಾಧಾಮದ ಫಲಾನುಭವಿಗಳು ಮತ್ತವರ ಕುಟುಂಬವನ್ನು ಸಂಸ್ಥೆಯು ಬೆಂಬಲಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿತು ಮತ್ತು ದಿನನಿತ್ಯದ ಆಹಾರ ಸಾಮಾಗ್ರಿಗಳು ಹಾಗೂ ಮೆಡಿಕಲ್ ಕಿಟ್‌ಗಳನ್ನು ಪೂರೈಸುವಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿತು.

ಹಾಗೇ ಈ ಪ್ರಕ್ರಿಯೆಯ ನಡುವೆ ಧ್ವನಿ ಫೌಂಡೇಷನ್ನಿನೊಂದಿಗಿನ "ನಿರಂತರ" ಎನ್ನುವ ಸಾಂಸ್ಥಿಕ ಅಭಿವೃದ್ಧಿ ಯೋಜನೆಯು ಸಂಸ್ಥೆಯ ವಿವಿಧ ಆಯಾಮಗಳನ್ನು ಬಲಪಡಿಸುವಲ್ಲಿ ಬಹಳಷ್ಟು ಮಾರ್ಗದರ್ಶನವನ್ನು ನೀಡಿತು. ಕೋವಿಡ್ ಸಾಂಕ್ರಾಮಿಕದಿಂದಾಗಿ ಸಂಸ್ಥೆಯ ಕಾರ್ಯ ಚಟುವಟಿಕೆಗಳಲ್ಲಿ ಹೊಸ ತಂತ್ರಗಳು ಮತ್ತು ವಿಧಾನಗಳನ್ನು ಅಳವಡಿಸಿಕೊಳ್ಳಲು ಕಲಿತೆವು. ಲಾಕ್‌ಡೌನ್‌ನಿಂದಾಗಿ ಕ್ಷೇತ್ರ ಭೇಟಿ ಮತ್ತು ಭೌತಿಕ ಭೇಟಿಗಳಿಗೆ ನಿರ್ಬಂಧವಿದ್ದರೂ ಕೋವಿಡ್ ನಿಯಮಗಳನ್ನು ಅನುಸರಿಸುವ ಮೂಲಕ ಫಲಾನುಭವಿಗಳು ಮತ್ತು ಭಾಗಿದಾರರೊಂದಿಗೆ ಸಂಸ್ಥೆಯು ನಿರಂತರ ಸಂಪರ್ಕದಲ್ಲಿ ಇರುವಂತೆ ನೋಡಿಕೊಂಡು ತನ್ನ ಸೇವೆಯನ್ನು ನಿರಂತರವಾಗಿಸಿತು ಹಾಗೂ ಕೋವಿಡ್ ಸಾಂಕ್ರಾಮಿಕವು ಹೊಸ ಕಲಿಕೆಗೆ ಅನುವು ಮಾಡಿಕೊಟ್ಟಿತು.

### 2020–21ನೇ ಸಾಲಿನ ಕಾರ್ಯಕ್ಷೇತ್ರದ ಪ್ರಮುಖ ಸುದ್ದಿಗಳು:

1) ಫಲಾನುಭವಿಗಳು ಮತ್ತು ಅವರ ಕುಟುಂಬಗಳ ಭೇಟಿ ಮತ್ತು ಬೆಂಬಲ
2) ಪುನಶ್ಚೇತನ ಕೇಂದ್ರದ ಬೆಳವಣಿಗೆ ಮತ್ತು ಪ್ರಮುಖರ ಭೇಟಿಗಳು
3) ಶಿಬಿರಗಳು, ಸಭೆ ಮತ್ತು ಕಾರ್ಯಾಗಾರ
4) ಕ್ಷೇತ್ರ ರಾಜಕೀಯ ನಾಯಕರ ಬೆಂಬಲ
5) ದಾನಿಗಳು, ಭಾಗಿದಾರರು ಮತ್ತು ಸಂಘ–ಸಂಸ್ಥೆಗಳ ಸಹಕಾರ
6) ಫಲಾನುಭವಿಗಳ ಸ್ವ–ಉದ್ಯೋಗಕ್ಕೆ ಸಹಕಾರ
7) ನಮ್ಮ ಹೆಮ್ಮೆ ಮತ್ತು ಸಾಧನೆ

# ಫಲಾನುಭವಿಗಳು ಮತ್ತು ಅವರ ಕುಟುಂಬಗಳ ಭೇಟಿ ಮತ್ತು ಬೆಂಬಲ

**1) ರೋಟರಿ ಕ್ಲಬ್ ವತಿಯಿಂದ ದಿವ್ಯಾಂಗರಿಗೆ ಮೆಡಿಕಲ್ ಕಿಟ್ ವಿತರಣಾ ಕಾರ್ಯಕ್ರಮ**




ಸೇವಾಭಾರತಿ ಕನ್ಯಾಡಿಯ ಸೇವಾನಿಕೇತನದಲ್ಲಿ ದಿನಾಂಕ 23/05/2020 ರಂದು ರೋಟರಿ ಕ್ಲಬ್ ಬೆಳ್ತಂಗಡಿ ಇದರ ವತಿಯಿಂದ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರಿಗೆ ಮೆಡಿಕಲ್ ಕಿಟ್ ವಿತರಣಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್‌ನ ಕಾರ್ಯದರ್ಶಿಯಾದ ರೊ| ಪ್ರಕಾಶ್ ನಾರಾಯಣ್ ರಾವ್ ರವರು ಮೆಡಿಕಲ್ ಕಿಟ್ ವಿತರಿಸಿ ಫಲಾನುಭವಿಗಳಿಗೆ ಶುಭಹಾರೈಸಿದರು. ಸೇವಾಭಾರತಿಯ ಕಾರ್ಯದರ್ಶಿಯಾದ ಶ್ರೀಮತಿ ಸ್ವರ್ಣಗೌರಿ, ಸೇವಾಧಾಮದ ಸಂಚಾಲಕರಾದ ಕೆ.ಪುರಂದರ ರಾವ್ ರವರು ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿದರು. ಸೇವಾಧಾಮದ ಮಾರ್ಗದರ್ಶಕರಾದ ಬಾಲಕೃಷ್ಣರವರು ಪ್ರಸ್ತಾವಿಸಿ ಧನ್ಯವಾದವಿತ್ತರು. ಸೇವಾಭಾರತಿಯ ಟ್ರಸ್ಟಿ ರಜತ್ ಕುಮಾರ್, ಸೇವಾಧಾಮದ ಫಿಸಿಯೋಥೆರಪಿಸ್ಟ್ ಅನಂತ್ ಕುಮಾರ್ ಟಿ. ವೇದಿಕೆಯಲ್ಲಿ ಉಪಸ್ಥಿತರಿದ್ದರು.

**ಎ.ಪಿ.ಡಿ. ಸಂಸ್ಥೆ ಬೆಂಗಳೂರು ವತಿಯಿಂದ ದಿನಸಿ ಕಿಟ್‌ಗಳ ಕೊಡುಗೆ**

ದಿನಾಂಕ: 25/05/2020 ಕೋವಿಡ್–19 ವೈರಸ್ ಮಹಾಮಾರಿಯಿಂದ ಪ್ರತಿಯೊಬ್ಬ ಬೆನ್ನುಮೂಳೆ ಮುರಿತಕ್ಕೊಳಗಾದವನ ಕುಟುಂಬ ಸಂಕಷ್ಟಕ್ಕೆ ಒಳಗಾಗಿರುವ ಹಿನ್ನಲೆಯಲ್ಲಿ ಸೇವಾಧಾಮದ ಮೂಲಕ ಸಹಾಯಹಸ್ತ ಚಾಚುವಂತಹ ನಿರಂತರ ಪ್ರಯತ್ನಗಳನ್ನು ಮಾಡಲಾಗಿತ್ತು. ಬೆಂಗಳೂರಿನ ಎ. ಪಿ. ಡಿ. ಸಂಸ್ಥೆಯು ನಮ್ಮ ಬೇಡಿ–ಕೆಗೆ ಸ್ಪಂದಿಸಿ ತಲಾ ರೂ. 1500/– ಮೌಲ್ಯದ ದಿನಸಿ ಕಿಟ್ ಗಳನ್ನು ಒದಗಿಸಿತು. ಉಡುಪಿಯಲ್ಲಿರುವ 50 ಮಂದಿ ಬೆನ್ನುಮೂಳೆ ಮುರಿತಗೊಂಡವರ ಮನೆ ಮನೆಗೆ ದಿನಾಂಕ ಮೇ 25, 26 ಮತ್ತು 27 ರಂದು ನಮ್ಮ ಕಾರ್ಯಕರ್ತರು ಹಾಗೂ ಸಿಬ್ಬಂದಿಗಳು ತೆರಳಿ ಹಸ್ತಾಂತರಿಸಿರುತ್ತಾರೆ.

**2) ರೋಟರಿ ಕ್ಲಬ್ ವತಿಯಿಂದ ಸೇವಾಭಾರತಿ ಸ್ಯಾನಿಟೈಸರ್ ಸ್ಟ್ಯಾಂಡ್ ವಿತರಣೆ:**




ಸೇವಾಭಾರತಿ ಕನ್ಯಾಡಿಯ ಸೇವಾನಿಕೇತನದಲ್ಲಿ ದಿನಾಂಕ 26/05/2020 ರಂದು ಬೆಳ್ತಂಗಡಿ ರೋಟರಿ ಕ್ಲಬ್ ವತಿಯಿಂದ ಸ್ಯಾನಿಟೈಸರ್ ಸ್ಟ್ಯಾಂಡನ್ನು ವಿತರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳ್ತಂಗಡಿ ರೋಟರಿ ಕ್ಲಬ್‌ನ ನಿಯೋಜಿತ ಅಧ್ಯಕ್ಷ ರೊ। ಬಿ. ಕೆ. ಧನಂಜಯ ರಾವ್, ನಿಯೋಜಿತ ಕಾರ್ಯದರ್ಶಿ ರೊ। ಶ್ರೀಧರ್ ಕೆ. ವಿ., ಸೇವಾಧಾಮದ ಮೆಂಟರ್ ಬಾಲಕೃಷ್ಣ, ಹಾಗೂ ಟ್ರಸ್ಟಿ ಕುಸುಮಾಕರ ಗೌಡ, ಫಿಸಿಯೋಥೆರಪಿಸ್ಟ್ ಅನಂತ್ ಕುಮಾರ್ ಟಿ. ಹಾಗೂ ಸಿಬ್ಬಂದಿ ಅಖಿಲೇಶ್ ಎ. ಉಪಸ್ಥಿತರಿದ್ದರು.

**3) ಸುಳ್ಯ ತಾಲ್ಲೂಕಿನಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರಿಗೆ ದಿನಸಿ ಕಿಟ್ ವಿತರಣೆ.**




ಸುಳ್ಯ : ದಿನಾಂಕ 06.12.2020 ಸೇವಾಧಾಮದ ಮುಖಾಂತರ ಸುಳ್ಯ ತಾಲೂಕಿನಲ್ಲಿರುವ 29 ಜನ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರಿಗೆ

ಬೆಂಗಳೂರಿನ ಸಮರ್ಥನಮ್ ಅಂಗವಿಕಲರ ಸಂಸ್ಥೆ ವತಿಯಿಂದ ದೊರಕಿದ ದಿನಸಿ ಕಿಟ್‌ಗಳ ವಿತರಣೆಯು ಸುಳ್ಯದಲ್ಲಿರುವ ಪ್ರಾ. ಕೃ. ಸಹಕಾರಿ ಸಂಘದಲ್ಲಿ ಸೇವಾಭಾರತಿಯ ಕಾರ್ಯದರ್ಶಿ ಸ್ವರ್ಣಗೌರಿ ಹಾಗೂ ಪ್ರಾ. ಕೃ. ಸಹಕಾರಿ ಸಂಘದ ಅಧ್ಯಕ್ಷರಾದ ಹರೀಶ್ ಕುಮಾರ್‌ರವರ ಮುಖಾಂತರ ವಿತರಿಸಲಾಯಿತು.

**4) ಬಂಟ್ವಾಳ ತಾಲ್ಲೂಕಿನಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರಿಗೆ ದಿನಸಿ ಕಿಟ್ ವಿತರಣೆ.**




ಬಂಟ್ವಾಳ :– ದಿನಾಂಕ 06.12.2020 ಸೇವಾಧಾಮದ ಮುಖಾಂತರ ಬಂಟ್ವಾಳ ತಾಲೂಕಿನಲ್ಲಿರುವ 30 ಜನ ಬೆನ್ನುಮೂಳೆ ಮೂರಿತಕ್ಕೊಳಗಾದ ದಿವ್ಯಾಂಗರಿಗೆ ಬೆಂಗಳೂರಿನ ಸಮರ್ಥನಮ್ ಅಂಗವಿಕಲರ ಸಂಸ್ಥೆ ನೀಡಿದ ಕಿಟ್ಟುಗಳನ್ನು ಅರ್ಕುಳ ಸೇವಾ ಟ್ರಸ್ಟ್ ಬಂಟ್ವಾಳ ಇದರ ಸಹಕಾರದಿಂದ ಫರಂಗಿಪೇಟೆ ಶ್ರೀ ರಾಮ ಪ್ರಾಥಮಿಕ ಶಾಲೆಯಲ್ಲಿ ವಿತರಿಸಲಾಯಿತು. ಸೇವಾಭಾರತಿಯ ಕಾರ್ಯದರ್ಶಿ ಸ್ವರ್ಣಗೌರಿ ಮತ್ತು ಸೇವಾಭಾರತಿ ಸಲಹಾ ಸಮಿತಿಯ ಸದಸ್ಯರಾದ ಡಾ. ಜಯಕುಮಾರ್ ಶೆಟ್ಟಿ ಹಾಗೂ ಶ್ರೀ ರಾಮ ಶಾಲೆಯ ಅಧ್ಯಕ್ಷರಾದ ವಜ್ರನಾಭ ಶೆಟ್ಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಫಲಾನುಭವಿಗಳಿಗೆ ಶುಭಹಾರೈಸಿದರು.

**5) ಸೇವಾಭಾರತಿಯಿಂದ ಧನಸಹಾಯ**

ದಿನಾಂಕ: 14.12.2020 ಸೇವಾಭಾರತಿಯಿಂದ ಧೃತಿ 6 ವರ್ಷದ ಬಾಲಕಿಗೆ ಕೆಂಪು ರಕ್ತದ ಕಣ ಮತ್ತು ಬಿಳಿ ರಕ್ತದ ಕಣ ದೇಹದಲ್ಲಿ ಉತ್ಪತ್ತಿಯಾಗದೆ ಬಾಲಕಿಯ ಅರೋಗ್ಯ ತಪಾಸಣೆಗೆ ಸುಮಾರು 15,000 ರೂಪಾಯಿ ತಿಂಗಳಿಗೆ ಖರ್ಚು ತಗಲುತ್ತದೆ. ಆದ್ದರಿಂದ ಬಾಲಕಿಯ ಪೋಷಕರಾದ ದಿನೇಶ್ ಆಗುಳಿಬೈಲ್ ಇವರು ಸೇವಾಭಾರತಿ ಸಂಸ್ಥೆಗೆ ಧನ ಸಹಾಯಕ್ಕಾಗಿ ಮನವಿ ಸಲ್ಲಿಸಿದರು. ಸೇವಾಭಾರತಿಯ ತಂಡದಿಂದ

ನಡೆದ ಸದಸ್ಯರ ಸಭೆಯಲ್ಲಿ ನಿರ್ಣಯಗೊಂಡಂತೆ ಬಾಲಕಿಗೆ 5,000 ರೂ.ಗಳನ್ನು ಸೇವಾಭಾರತಿಯ ಅಧ್ಯಕ್ಷರ ಮುಖಾಂತರ ಪೋಷಕರಿಗೆ ಹಸ್ತಾಂತರಿಸಲಾಯಿತು.

### 6) ಒತ್ತಡ ಗಾಯಕ್ಕೊಳಗಾದ ದಿವ್ಯಾಂಗರಿಗೆ ಉಚಿತ ಚಿಕಿತ್ಸೆ

ಸೇವಾಧಾಮದ ಮೂಲಕ ಒತ್ತಡಗಾಯಕ್ಕೊಳಗಾದ ವ್ಯಕ್ತಿಗಳ ಗುಣಮುಖಕ್ಕಾಗಿ ಮಿಷನ್ 50 ಯೋಜನೆಯಡಿ ಬಣಕಲ್‌ನ ಸೋಮೇಶ್‌ಗೆ ಮೊತ್ತ ಮೊದಲಾಗಿ ಚಿಕಿತ್ಸೆ ಪ್ರಾರಂಭಿಸಲಾಯಿತು. ದಿನಾಂಕ 03.02.2021 ರಂದು 2ನೇಹಂತವಾಗಿ ಬೆಳ್ತಂಗಡಿ ತಾಲೂಕು ಮತ್ತು ಬಂಟ್ವಾಳ ಸುಳ್ಯ, ಉಡುಪಿ ಜಿಲ್ಲೆಯಲ್ಲಿನ ಒತ್ತಡ ಗಾಯಕ್ಕೊಳಗಾದ ಒಟ್ಟು 13 ಮಂದಿ ದಿವ್ಯಾಂಗರಿಗೆ ಚಿಕಿತ್ಸೆ ನೀಡಲಾಯಿತು.ಎ.ಪಿ.ಡಿ ಬೆಂಗಳೂರು ಹಾಗೂ ಸಸ್ಯಾಮ್ ಇಂಡಿಯಾ ಫೌಂಡೇಶನ್ ನ ಸಸಹಕಾರದಲ್ಲಿ ನಡೆಯುವ ಯೋಜನೆಯಲ್ಲಿ ಡಾ.ಶೆರ್ಲಿ ಕೊಲಾಸೊ ಮತ್ತು ಡೇವಿಡ್ ಇಟಾಸ್ಕಿ ಇವರ ತಂಡ ಭಾಗವಹಿಸಿತ್ತು.

### 7) ಸೇವಾಧಾಮದಿಂದ ರಾಂಪ್‌ಗೆ ಧನಸಹಾಯ



ಸೇವಾಭಾರತಿ ಅಂಗಸಂಸ್ಥೆಯಾದ ಸೌತಡ್ಕ ಸೇವಾಧಾಮ ಕೇಂದ್ರದಿಂದ ಬೆನ್ನುಹುರಿ ಮುರಿತಗೊಂಡ ಸುಳ್ಯದ ಮೇದಿನಡ್ಕ ನಿವಾಸಿಯಾದ ನಿಶಾಂತ್ ಇವರ ಮನೆಗೆ ರಾಂಪ್ ಹಾಕಿಸಿದ ಬಾಬ್ತು 5,000 ರೂಪಾಯಿ ಹಾಗೂ ಮೆಡಿಕಲ್ ಕಿಟ್‌ನ್ನು ಸಂಸ್ಥೆಯ ಅಧ್ಯಕ್ಷರಾದ ಕನ್ಯಾಡಿ ವಿನಾಯಕ ರಾವ್  ಹಸ್ತಾಂತರಿಸಿದರು. ಕಳೆದ 3 ವರ್ಷಗಳಿಂದ ಬೆನ್ನುಮೂಳೆ ಮುರಿತಕ್ಕೊಳಗಾದವರಿಗಾಗಿ ಶ್ರಮಿಸುತ್ತಿರುವ ಸೇವಾಧಾಮದ ವತಿಯಿಂದ ಈ ವರ್ಷದ ಯೋಜನೆಯಡಿ ನೀಡಲ್ಪಡುತ್ತಿರುವ ಧನಸಹಾಯವೂ ಇದಾಗಿದ್ದು ಇತ್ತೀಚೆಗೆ ಸ್ವ–ಉದ್ಯೋಗದ ಯೋಜನೆಯಡಿ 8 ಮಂದಿಗೆ ಜೇನು ಕೃಷಿಗೂ ಸಹಾಯ ನೀಡಿತ್ತು. ಈ ಸಂದರ್ಭದಲ್ಲಿ ಸಂಸ್ಥೆಯ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್ ಹಾಗೂ ನಿಶಾಂತ್ ಕುಟುಂಬದವರು ಹಾಜರಿದ್ದರು.

## 8) ಸೋಮೇಶ್ ಬಣಕಲ್ ಇವರ ಆಸ್ಪತ್ರೆ ವೆಚ್ಚ ಹಾಗೂ ಗಾಳಿ ಹಾಸಿಗೆಗೆ ಧನಸಹಾಯ



ಸೇವಾಧಾಮ ಕೇಂದ್ರದ ವತಿಯಿಂದ ಸೋಮೇಶ್ ಬಣಕಲ್ ಇವರು ಕಳೆದ ಒಂಬತ್ತು ತಿಂಗಳುಗಳಿಂದ ಬೆನ್ನುಹುರಿ ಮುರಿತಕ್ಕೊಳಗಾಗಿ ಮಲಗಿದ ಸ್ಥಿತಿಯಲ್ಲಿದ್ದರು. ಇವರನ್ನು ಸ್ಥಳೀಯ ಸಂಘದ ಮುಖೇನ ಗುರುತಿಸಿ ಸೇವಾಧಾಮದ ಸಿಬ್ಬಂದಿ ಅವರ ಮನೆಗೆ ತೆರಳಿ ಅವರನ್ನು ಪರಿಶೀಲಿಸಿದಾಗ ಅವರು ನಾಲ್ಕನೇ ಹಂತದ ಒತ್ತಡ ಗಾಯಕ್ಕೆ ಒಳಗಾಗಿದ್ದರು. ನಂತರ ಸೇವಾಧಾಮ ಮತ್ತು ಎಪಿಡಿ, ಬೆಂಗಳೂರು ಹಾಗೂ ಗುಡ್ ಸ್ಯಾಮ್ ಫೌಂಡೇಶನ್, ಬೆಂಗಳೂರು ಸಹಭಾಗಿತ್ವದಲ್ಲಿ ಪ್ರಾರಂಭಗೊಂಡ ಒತ್ತಡಗಾಯಕ್ಕೆ ಒಳಗಾದ 50 ಜನ ದಿವ್ಯಾಂಗರನ್ನು ಗುಣಪಡಿಸುವ ಯೋಜನೆ “ಮಿಷನ್ 50” ಅಡಿಯಲ್ಲಿ ಚಿಕಿತ್ಸೆಗೆ ಒಳಪಡಿಸಲಾಯಿತು. ರಕ್ತವು ಕಡಿಮೆ ಇದ್ದ ಕಾರಣ ಅವರನ್ನು ಸ್ಥಳೀಯ ಸಂಘದ ಸಹಾಯದಿಂದ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿತ್ತು. ನಂತರ ಅವರ ಚಿಕಿತ್ಸೆಗೆ ಬೇಕಾದ ವ್ಯವಸ್ಥೆಗಳು ಇಲ್ಲದೆ ಇದ್ದ ಕಾರಣ ಅವರನ್ನು ಸೇವಾಧಾಮದ ಮುಖಾಂತರ ಉಜಿರೆಯ ಬೆನಕ ಆಸ್ಪತ್ರೆಗೆ ದಾಖಲು ಮಾಡಿದ್ದು ಅವರಿಗೆ 2 ಯೂನಿಟ್ ರಕ್ತವನ್ನು ಆರೋಗ್ಯ ಭಾರತಿಯ ಮೂಲಕ ಉಚಿತವಾಗಿ ಮಂಗಳೂರಿನ ಕೆ.ಎಂ.ಸಿ. ಆಸ್ಪತ್ರೆಯಿಂದ ನೀಡಲಾಯಿತು. ನಂತರ ಬೆನಕ ಆಸ್ಪತ್ರೆಯ ನರ್ಸಿಂಗ್ ಸಿಬ್ಬಂದಿಗಳು ಹಾಗೂ ಡಾಕ್ಟರ್ ಗೋಪಾಲಕೃಷ್ಣ ಇವರ ಮುಖಾಂತರ ಒತ್ತಡ ಗಾಯ ನಿಯಂತ್ರಣ ತರಬೇತಿಯನ್ನು ಕೊಡಲಾಯಿತು. ಸೋಮೇಶ್ ಬಣಕಲ್ ಇವರ ಆಸ್ಪತ್ರೆಯ ವೆಚ್ಚ 25,000/– ರೂಪಾಯಿ ಆಗಿದ್ದು 10,000/– ರೂಪಾಯಿಯನ್ನು ಸೇವಾಭಾರತಿ ಸಂಸ್ಥೆಯು ಧನಸಹಾಯವನ್ನು ಮಾಡಿ, ರೋಟರಿಯನ್ ಡಾಕ್ಟರ್ ಗೋಪಾಲಕೃಷ್ಣರು ಸೇವಾಧಾಮದಿಂದ ಲಭ್ಯವಿರುವ ಉಚಿತ ಗಾಳಿ ಹಾಸಿಗೆಯನ್ನು ಹಸ್ತಾಂತರಿಸಿ ಅವರು ಬೇಗ ಗುಣಮುಖರಾಗಲಿ ಎಂದು ಶುಭಹಾರೈಸಿದರು. ಈ ಸಂದರ್ಭದಲ್ಲಿ ಸೇವಾಭಾರತಿಯ ಸಿಬ್ಬಂದಿಗಳಾದ ಅಖಿಲೇಶ್ ಎ. ಹಾಗೂ ಚರಣ್ ಕುಮಾರ್ ಎಮ್. ಉಪಸ್ಥಿತರಿದ್ದರು.

# ಪುನಃಶ್ಚೇತನ ಕೇಂದ್ರದ ಬೆಳವಣಿಗೆ ಮತ್ತು ಪ್ರಮುಖರ ಭೇಟಿಗಳು

## 1) ಸೇವಾಧಾಮಕ್ಕೆ ಖ್ಯಾತ ವೈದ್ಯರ ಭೇಟಿ




ಸೌತಡ್ಕ : ದಿನಾಂಕ 03.12.2020 ಸೇವಾಧಾಮಕ್ಕೆ ಅಂತಾರಾಷ್ಟ್ರೀಯ ವಿಕಲಚೇತನರ ದಿನದ ಆಚರಣೆಯ ಪ್ರಯುಕ್ತ ಕೆ. ಎಂ. ಸಿ. ಮಣಿಪಾಲದ ಡಾ. ರಂಜನ್ ಎಸ್. ಎಸ್., ಸಿಸ್ಟರ್ ಪಲ್ಲವಿ ಹಾಗೂ ಕೆ. ಎಂ. ಸಿ. ಮಂಗಳೂರಿನ ಡಾ. ಆನ್‌ರವರು ಆಗಮಿಸಿ ಸನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿದರು. ಅಲ್ಲದೆ ಸಲಹೆ ಮಾರ್ಗದರ್ಶನಗಳನ್ನು ಹಾಗೂ ಉಚಿತ ಔಷಧಿಗಳನ್ನು ನೀಡಿದರು. ಸೇವಾಧಾಮದ ಸಂಚಾಲಕರಾದ ಶ್ರೀ ಕೆ. ಪುರಂದರ ರಾವ್ ಸೇವಾಧಾಮದ ಸಾಧನೆಗಳ ಬಗ್ಗೆ ತಿಳಿಯಪಡಿಸಿದರು. ಅಂತಾರಾಷ್ಟ್ರೀಯ ವಿಕಲಚೇತನರ ದಿನದ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಕಾರ್ಯದರ್ಶಿಯಾದ ಸ್ವರ್ಣಗೌರಿಯವರು ದಿವ್ಯಾಂಗರು ಮತ್ತು ಅವರ ಪೋಷಕರು ಉಪಸ್ಥಿತರಿದ್ದರು.

## 2) ಎಲ್.ಐ.ಸಿ. ಗೋಲ್ಡನ್ ಜುಬ್ಲೀ ಫೌಂಡೇಶನ್ ವತಿಯಿಂದ ಸೇವಾಧಾಮಕ್ಕೆ ಸೋಲಾರ್ ಪವರ್ ಸಿಸ್ಟಮ್ ಕೊಡುಗೆ.



ಸೌತಡ್ಕ:– ಸೇವಾಧಾಮದಲ್ಲಿ ಎಲ್.ಐ.ಸಿ. ಗೋಲ್ಡನ್ ಜುಬ್ಲೀ ಫೌಂಡೇಶನ್ ವತಿಯಿಂದ ಕೊಡುಗೆಯಾಗಿ ನೀಡಿದ ಸೋಲಾರ್ ಪ್ಯಾನಲ್ ವಿದ್ಯುತ್ ಘಟಕ ಹಾಗೂ ವಾಟರ್ ಹೀಟರ್ ವ್ಯವಸ್ಥೆಯ ಉದ್ಘಾಟನಾ ಸಮಾರಂಭವು ನೆರವೇರಿತು. ಮುಖ್ಯ ಅಥಿತಿಗಳಾಗಿ ಕರ್ನಾಟಕದ ಎಲ್. ಐ. ಸಿ ಯ ರೀಜನಲ್ ಮ್ಯಾನೇಜರ್ ಶ್ರೀ ಎಮ್. ಜಗನ್ನಾಥ್, ಉಡುಪಿಯ ಸೀನಿಯರ್ ಡಿವಿಷನಲ್ ಮ್ಯಾನೇಜರ್ ಶ್ರೀಮತಿ ಬಿಂದು ರಾಬರ್ಟ್, ಉಡುಪಿಯ ಮಾರ್ಕೆಟಿಂಗ್ ಮ್ಯಾನೇಜರ್ ಶ್ರೀ ವಿ. ಶಿರೂರ್, ಬಂಟ್ವಾಳದ ಚೀಫ್ ಮ್ಯಾನೇಜರ್ ಶ್ರೀ ಪಿ. ಸಿ. ನಾಯಕ್ ಮತ್ತು ಉಡುಪಿಯ ಹೆಲ್ತ್ ಇನ್ಶೂರೆನ್ಸ್ ಮ್ಯಾನೇಜರ್ ಶ್ರೀ ಎ. ಮೋಹನ್ ದಾಸ್, ಬೆಳ್ತಂಗಡಿಯ ಬ್ರಾಂಚ್ ಮ್ಯಾನೇಜರ್ ಶ್ರೀ ದೇವಪ್ಪ ನಾಯಕ್. ಪಿ, ಬೆಳ್ತಂಗಡಿಯ ಡೆವಲಪ್ಮೆಂಟ್ ಆಫೀಸರ್ ಶ್ರೀ ಉದಯ ಶಂಕರ್, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಇದರ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್, ಮತ್ತು ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್, ಸೇವಾಧಾಮದ ಸಂಚಾಲಕರು ಶ್ರೀ ಕೆ. ಪುರಂದರ ರಾವ್, ಸೇವಾಭಾರತಿಯ ಕಾರ್ಯದರ್ಶಿ ಶ್ರೀಮತಿ ಸ್ವರ್ಣಗೌರಿ, ಸೇವಾಭಾರತಿಯ ಟ್ರಸ್ಟಿಗಳು ಹಾಗೂ ಸದಸ್ಯರು ಹಾಜರಿದ್ದರು.

### 3) ಸೇವಾಧಾಮಕ್ಕೆ ಖ್ಯಾತ ವೈದ್ಯರ ಭೇಟಿ




ಸೌತಡ್ಕ : ಅಂತಾರಾಷ್ಟ್ರೀಯ ವಿಕಲಚೇತನರ ದಿನದಂದು ಕೆ. ಎಂ. ಸಿ. ಅತ್ತಾವರ ವಿಭಾಗ ಮತ್ತು ಕೆ. ಎಂ. ಸಿ. ಮಂಗಳೂರು ವಿಭಾಗದಿಂದ ಖ್ಯಾತ ವೈದ್ಯರ ಹಾಗೂ ಮಂಗಳೂರು ವಿಭಾಗದಿಂದ ಸಿಸ್ಟರ್ ಪಲ್ಲವಿ ಇವರು ಸೇವಾಧಾಮಕ್ಕೆ ಭೇಟಿ ನೀಡಿದರು. ಅಂತಾರಾಷ್ಟ್ರೀಯ ವಿಕಲಚೇತನರ ದಿನದ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಇವರು ಸೇವಾಧಾಮದ ಕಾರ್ಯಕ್ರಮ ಮತ್ತು ದಿವ್ಯಾಂಗರಿಗೆ ನೀಡುವ ಸೌಕರ್ಯಗಳ ಬಗ್ಗೆ ಮಾಹಿತಿ ನೀಡಿ, ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸಿದರು.

ಸೇವಾಭಾರತಿಯ ಕಾರ್ಯದರ್ಶಿಯಾದ ಸ್ವರ್ಣಗೌರಿಯವರು ಸೇವಾಧಾಮದ ಇಂದಿನ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು. ಸೇವಾಧಾಮದ ಸಂಚಾಲಕರಾದ ಶ್ರೀ ಕೆ. ಪುರಂದರ ರಾವ್ ಸೇವಾಧಾಮದ ಸಾಧನೆಗಳ ಬಗ್ಗೆ ತಿಳಿಸಿದರು. ಈ ಕಾರ್ಯಕ್ರಮದಲ್ಲಿ ದಿವ್ಯಾಂಗರು ಮತ್ತು ಅವರ ಪೋಷಕರು ಉಪಸ್ಥಿತರಿದ್ದರು.

**4) ಸೇವಾಭಾರತಿಯಿಂದ ಮಾಹೆ ಯೂನಿವರ್ಸಿಟಿ ಡೀನ್‌ರ ಭೇಟಿ**



ಸೇವಾಧಾಮ, ಬೆನ್ನುಮೂಳೆ ಮುರಿತಕ್ಕೊಳಗಾದವರಿಗಾಗಿನ ಪುನಃಶ್ಚೇತನ ಕೇಂದ್ರಕ್ಕೆ ತಿಂಗಳಿಗೆ ಒಂದು ಬಾರಿಯಾದರೂ ಕೆ.ಎಂ.ಸಿ.ಯ ವೈದ್ಯರ ತಂಡ ಭೇಟಿ ನೀಡಿ, ವೈದ್ಯಕೀಯ ನೆರವು ನೀಡುವಂತೆ ಸೇವಾಭಾರತಿಯ ತಂಡ ಮಣಿಪಾಲದ ಮಾಹೆ ವಿಶ್ವವಿದ್ಯಾಲಯದ ಡೀನ್ ಡಾಕ್ಟರ್ ಶರತ್ ಕುಮಾರ್ ಹಾಗೂ ಅಸಿಸ್ಟೆಂಟ್ ಪ್ರೊಫೆಸರ್ ಡಿಪಾರ್ಟ್‌ಮೆಂಟ್ ಆಫ್ ಪಿ.ಎಂ.ಆರ್. ಡಾಕ್ಟರ್ ರಂಜನ್ ಎಸ್.ಎಸ್.ರ ಮೂಲಕ ಮನವಿ ಸಲ್ಲಿಸಿತು. ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರು ಕೆ. ವಿನಾಯಕ ರಾವ್, ಸೇವಾಧಾಮ ನಿರ್ದೇಶಕರಾದ ರಾಯನ್ ಫೆರ್ನಾಂಡಿಸ್, ಸಹಭಾಗಿ ಸಂಸ್ಥೆ ಡಿ.ಎನ್.ಎ.ಯ ಮ್ಯಾನೇಜರ್ ರೂಪಲಕ್ಷ್ಮೀ ಹಾಗೂ ಸೇವಾಭಾರತಿಯ ಕಾರ್ಯಕ್ರಮ ಸಂಯೋಜಕರಾದ ಅಖಿಲೇಶ್ ಎ. ಉಪಸ್ಥಿತರಿದ್ದರು. ಮನವಿಗೆ ಆಸ್ಪತ್ರೆ ಮಂಡಳಿ ಪೂರಕವಾಗಿ ಸ್ಪಂದಿಸಿರುವುದು ಉಲ್ಲೇಖನೀಯ ಸಂಗತಿ.

**5) ಕೆನರಾ ಸ್ಪೈನ್ ಫೋರಂನಿಂದ ಸೇವಾಧಾಮ ಭೇಟಿ ಹಾಗೂ ಸಹಾಯ ಹಸ್ತದ ಭರವಸೆ.**

ಮಂಗಳೂರಿನಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಕೆನರಾ ಸ್ಪೈನ್ ಫೋರಂನ ತಂಡವು ಸೇವಾಧಾಮಕ್ಕೆ ಭೇಟಿ ನೀಡಿತು. ಮುಂದಿನ ದಿನಗಳಲ್ಲಿ




ಬೆನ್ನುಹುರಿ ಅಪಘಾತಕ್ಕೊಳಗಾದ ಅವರ ಜೀವನ ಸುಧಾರಿಸಲು ವಹಿಸಬೇಕಾದ ಪಾತ್ರಗಳ ಕುರಿತು ಸೇವಾಭಾರತಿಯ ಪ್ರಮುಖರೊಂದಿಗೆ ಚರ್ಚೆ ನಡೆಸಲಾಯಿತು. ಕೆನರಾ ಫೋರಂನ ಕಾರ್ಯದರ್ಶಿ ಡಾ. ಜನಾರ್ದನ ಐತಾಳ್, ಖಜಾಂಚಿ ಡಾ. ಈಶ್ವರ ಕೀರ್ತಿ ಹಾಗೂ ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್, ಥೆರಪಿಸ್ಟ್ ಧನೇಂದ್ರ, ವಾರ್ಡನ್ ಆಶ್ರೀತ್ ಈ ಸಂದರ್ಭದಲ್ಲಿ ಹಾಜರಿದ್ದರು.

## ಶಿಬಿರಗಳು, ಸಭೆ ಮತ್ತು ಕಾರ್ಯಾಗಾರ

### 1) ರಕ್ತದಾನ ಶಿಬಿರ, ಧರ್ಮಸ್ಥಳ

ಧರ್ಮಸ್ಥಳ: ಸೇವಾಭಾರತಿ, ಕನ್ಯಾಡಿ – ॥ ಇದರ ಆಶ್ರಯದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ (ನಿ), ಧರ್ಮಸ್ಥಳ ಇದರ ಸಹಕಾರದಲ್ಲಿ ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿ, ಲೇಡಿ ಗೋಷನ್ ಆಸ್ಪತ್ರೆ, ಮಂಗಳೂರು, ವೀರ ಕೇಸರಿ, ಬೆಳ್ತಂಗಡಿ, ಯುವ ಚಿಗುರು ವಾಟ್ಸಪ್ ಗ್ರೂಪ್ಸ್ ಹಾಗೂ ರೋಟರಿ ಕ್ಲಬ್, ಬೆಳ್ತಂಗಡಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಕ್ಟೋಬರ್ 10, 2020ರಂದು ಅಟಲ್‌ಜೀ ಸಭಾ ಭವನ, ಕಲ್ಲೇರಿಯಲ್ಲಿ ಧರ್ಮಸ್ಥಳ ಬೃಹತ್ ರಕ್ತದಾನ ಶಿಬಿರ ನಡೆಯಿತು. ಶಿಬಿರದ ಉದ್ಘಾಟನೆಯನ್ನು ಶ್ರೀ ಬಿ. ಹರಿದಾಸ ಗಾಂಭೀರ್ ಅಧ್ಯಕ್ಷರು, ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ, (ನಿ.) ಧರ್ಮಸ್ಥಳ ಇವರು ನೆರವೇರಿಸಿ ರಕ್ತದಾನದ ಅವಶ್ಯಕತೆ ಬಗ್ಗೆ ತಿಳಿಸಿ ಶುಭ ಹಾರೈಸಿದರು. ಶ್ರೀ ಕೆ. ವಿನಾಯಕ ರಾವ್. ಅಧ್ಯಕ್ಷರು ಸೇವಾಭಾರತಿ ಕನ್ಯಾಡಿ ಅಧ್ಯಕ್ಷತೆ ವಹಿಸಿ ಶಿಬಿರದ ಉದ್ದೇಶಗಳ ಬಗ್ಗೆ ಹಾಗೂ ಯುವ ಜನತೆಯಲ್ಲಿ




ರಕ್ತದಾನದ ಅರಿವನ್ನು ಮೂಡಿಸುವುದರ ಅಗತ್ಯವಿದೆಯೆಂದು ತಿಳಿಸಿದರು. ವೇದಿಕೆಯಲ್ಲಿ ರೋ। ಬಿ. ಕೆ. ಧನಂಜಯ ರಾವ್ ಅಧ್ಯಕ್ಷರು, ರೋಟರಿ ಕ್ಲಬ್ ಬೆಳ್ತಂಗಡಿ, ಶ್ರೀ ಸುಧಾಕರ್ ಉಪಾಧ್ಯಕ್ಷರು, ವೀರಕೇಸರಿ, ಬೆಳ್ತಂಗಡಿ, ಶ್ರೀ ಹರೀಶ್ ಸುವರ್ಣ ಅಡ್ಮಿನ್, ಯುವಚಿಗುರು ವಾಟ್ಸಪ್ ಗ್ರೂಪ್, ಪ್ರವೀಣ್ ಕುಮಾರ್ ಸಂಚಾಲಕರು, ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಮಂಗಳೂರು ಇವರುಗಳು ಉಪಸ್ಥಿತರಿದ್ದರು.

## 2) ಬೆಳ್ತಂಗಡಿ ತಾಲೂಕಿನಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರ ಪಾಲಕರ ಸಭೆ



ಬೆಳ್ತಂಗಡಿ : ಬೆನ್ನುಹುರಿ ಅಪಘಾತಕ್ಕೊಳಗಾದ ಪ್ರತಿಯೊಬ್ಬ ದಿವ್ಯಾಂಗರು ಸ್ವ ಸಾಮರ್ಥ್ಯದಿಂದ ಬದುಕನ್ನು ನಿರ್ವಹಿಸುವುದನ್ನು ರೂಢಿಯನ್ನಾಗಿಸಿಕೊಳ್ಳುವುದು ಅಗತ್ಯವಿದೆ ಎಂದು ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ನುಡಿದರು. ದಿನಾಂಕ 02/11/2020 ಬೆಳ್ತಂಗಡಿಯ ಅಂಬೇಡ್ಕರ್ ಭವನದಲ್ಲಿ ಜರುಗಿದ ಬೆಳ್ತಂಗಡಿ

ತಾಲೂಕಿನಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದ ದಿವ್ಯಾಂಗರ ಪಾಲಕರ ಸಭೆಯಲ್ಲಿ ಸೇವಾಧಾಮದ ಮೂಲಕ ಸಿಗುತ್ತಿರುವ ಸೌಲಭ್ಯಗಳು ಹಾಗೂ ಸರಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ, ಪಾಲಕರಿಗೆ ಮನೋಸ್ಥೈರ್ಯ ತುಂಬಿದರು. ಈ ಸಂದರ್ಭದಲ್ಲಿ ಬೆಳ್ತಂಗಡಿ ತಾಲೂಕಿನ ಎಮ್. ಆರ್. ಡಬ್ಲ್ಯೂ. ಜೋನ್ ಮತ್ತು ಇಂದಬೆಟ್ಟು ಗ್ರಾಮ ಪಂಚಾಯತ್‌ನ ವಿ. ಆರ್. ಡಬ್ಲ್ಯೂ ಜೋಸೆಫ್ ಉಪಸ್ಥಿತರಿದ್ದು, ಸರಕಾರಿ ಸೌಲಭ್ಯಗಳ ವಿವರ ನೀಡಿದರು.

### 3) ಉಚಿತ ಜೇನು ಕೃಷಿ ಕಾರ್ಯಾಗಾರ



ಧರ್ಮಸ್ಥಳ : ಸೇವಾಭಾರತಿ ಕನ್ಯಾಡಿ ಇದರ ಆಶಯದಲ್ಲಿ ಎ. ಪಿ. ಡಿ. ಬೆಂಗಳೂರು ಸಹಯೋಗದಲ್ಲಿ ನವೆಂಬರ್ 11.11.2020ರಂದು ಸೇವಾನಿಕೇತನದಲ್ಲಿ ಉಚಿತವಾಗಿ 2 ದಿನಗಳ ಜೇನು ಕೃಷಿ ಕಾರ್ಯಗಾರ ನಡೆಯಿತು. ತರಬೇತಿ ಕಾರ್ಯಾಗಾರದ ಉದ್ಘಾಟನೆಯನ್ನು ಸೇವಾಭಾರತಿಯ ಸಲಹಾ ಮಂಡಳಿಯ ಸದಸ್ಯರಾದ ಶ್ರೀಮತಿ ಮನೋರಮಾ ಭಟ್ ನೆರವೇರಿಸಿ, ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸಲು ಸುಸ್ಥಿರತೆ ಮುಖ್ಯ ಹಾಗೆಯೇ ಕೆಲಸದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದು ಕಾರ್ಯಾಗಾರಕ್ಕೆ ಶುಭಾಹಾರೈಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಶ್ಯಾಮ್ ಭಟ್ ವಾದ್ಯಕೋಡಿ, ಶ್ರೀ ಕೃಷ್ಣ, ಶಶಿಧರ್ ರಾವ್ ಮತ್ತು ಒಟ್ಟು 8 ಮಂದಿ ದಿವ್ಯಾಂಗರಿಗೆ ತಲಾ 3 ಜೇನು ಕುಟುಂಬಗಳನ್ನು ಮತ್ತು ಪರಿಕರಗಳನ್ನು ವಿತರಿಸಲಾಯಿತು.

### 4) ಸೇವಾಭಾರತಿಯ 16ನೇ ವರ್ಷದ ವಾರ್ಷಿಕೋತ್ಸವ ಮತ್ತು ಸೇವಾಕಾರ್ಯಗಳ ಲೋಕಾರ್ಪಣೆ

ಸೇವಾಭಾರತಿ ಕನ್ಯಾಡಿ ಇದರ ವಾರ್ಷಿಕೋತ್ಸವ ಕನ್ಯಾಡಿ ಹಿರಿಯ ಪ್ರಾಥಮಿಕ ಶಾಲಾ ಸಭಾಭವನದಲ್ಲಿ ಮಾರ್ಚ್ 14, 2021 ರಂದು ನೆರವೇರಿತು. ಕಾರ್ಯಕ್ರಮದಲ್ಲಿ




ಶ್ರೀ ಹರೀಶ್ ಪೂಂಜ ಶಾಸಕರು, ಬೆಳ್ತಂಗಡಿ ತಾಲೂಕು, ಶ್ರೀ ಪ್ರಭಾಕರ್ ಹೆಗ್ಡೆ, ಉದ್ಯಮಿಗಳು, ಉಜಿರೆ, ಶ್ರೀ ಕೆ. ವಿನಾಯಕ ರಾವ್, ಅಧ್ಯಕ್ಷರು, ಸೇವಾಭಾರತಿ, ಶ್ರೀ ಕೆ. ಎಸ್. ಮಂಜುನಾಥ್ ಸಂಸ್ಥಾಪಕರು ಹಾಗೂ ಅಧ್ಯಕ್ಷರು ನವಚೇತನ ಚಾರಿಟೇಬಲ್ ಟ್ರಸ್ಟ್ (ರಿ.) ರಾಮನಗರ, ಶ್ರೀ ವೆಂಕಟರಾಮ ಕೃಷ್ಣನ್ ನೆಕ್ಕಿನ ಸಿ.ಇ.ಓ., ಎ.ಪಿ.ಡಿ., ಬೆಂಗಳೂರು, ಶ್ರೀ ಆಶಿತ್ ಕಲ್ಲಾಜೆ, ಯುವ ತೇಜಸ್ಸು ಟ್ರಸ್ಟ್ (ರಿ.) ಸುಳ್ಯ, ಶ್ರೀ ರೋಷನ್ ಬೆಳ್ಮಣ್ಣು, ಹ್ಯುಮಾನಿಟಿ ಟ್ರಸ್ಟ್ ಬೆಳ್ಮಣ್ಣು, ಶ್ರೀ ಕೆ. ಕೃಷ್ಣ ಭಟ್, ಅಧ್ಯಕ್ಷರು, ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ (ರಿ.) ಕೊಕ್ಕಡ, ಶ್ರೀ ಕೆ. ಪುರಂದರ ರಾವ್ ಸಂಚಾಲಕರು, ಸೇವಾಧಾಮ, ಸೌತಡ್ಕ, ಶ್ರೀಮತಿ ಶಾಂತಾ ಪಿ. ಶೆಟ್ಟಿ, ಅಧ್ಯಕ್ಷರು ಶ್ರೀ ದುರ್ಗಾ ಮಾತೃಮಂಡಳಿ ಮತ್ತು ಶ್ರೀ ಸೂರ್ಯಪ್ರಕಾಶ್ ಎಂ., ಅಧ್ಯಕ್ಷರು, ಶಾಲಾ ಮೇಲುಸ್ತುವಾರಿ ಸಮಿತಿ, ಕನ್ಯಾಡಿ ಹಾಗೂ ಶ್ರೀ ಕೆ. ಪ್ರತಾಪಸಿಂಹ ನಾಯಕ್, ವಿಧಾನ ಪರಿಷತ್ ಸದಸ್ಯರು, ಬೆಳ್ತಂಗಡಿ ತಾಲೂಕು ಸಭೆಯಲ್ಲಿ ಉಪಸ್ಥಿತರಿದ್ದರು.

ಟೊಯೋಡಾ ಗೋಸಾಯಿ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ದೊರಕಿಸಿಕೊಟ್ಟ ಹತ್ತಿಯಿಂದ ಬತ್ತಿ ಮಾಡುವ ಯಂತ್ರಗಳ ಹಸ್ತಾಂತರ ಮತ್ತು ಎ.ಪಿ.ಡಿ, ಬೆಂಗಳೂರು ಇವರು ಒದಗಿಸಿದ 3 ಮಂದಿಯ ಮನೆಗಳಿಗೆ ಸೌರ ವಿದ್ಯುತ್ ಘಟಕಗಳ ಹಸ್ತಾಂತರ, 3 ಮಂದಿ ಮನೆಗೆ ಹತ್ತಿಯಿಂದ ಬತ್ತಿ ಮಾಡುವ ಯಂತ್ರಗಳಿಗೆ ಸೌರವಿದ್ಯುತ್ ಘಟಕಗಳ ಹಸ್ತಾಂತರ, ಓರ್ವರಿಗೆ ಅಡಿಕೆ ಸಿಪ್ಪೆ ಸುಲಿಯುವ ಯಂತ್ರಕ್ಕೆ ಸೌರವಿದ್ಯುತ್ ಘಟಕ ಹಸ್ತಾಂತರ, ಸೆಲ್ಕೊ ಲಿಮಿಟೆಡ್‌ನಿಂದ ಸೋಲಾರ್ ಚಾಲಿತ ಬಿಸಿ ನೀರು ಘಟಕ ಮತ್ತು ಯುವ ತೇಜಸ್ಸು ಟ್ರಸ್ಟ್, ಸುಳ್ಯ ಇವರಿಂದ ಸೇವಾಧಾಮಕ್ಕೆ

ಸೋಲಾರ್ ಚಾಲಿತ ಆಟೋಮೆಟಿಕ್ ಹತ್ತಿ ಕಟ್ಟರ್ ಯಂತ್ರ ಹಾಗೂ ಸೀಲರ್ ಯಂತ್ರಗಳ ಹಸ್ತಾಂತರಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಶ್ರೀ ಹರೀಶ್ ಪೂಂಜ ಶಾಸಕರು ಬೆಳ್ತಂಗಡಿ ತಾಲೂಕು ಸೇವಾಭಾರತಿಯ ಸೇವಾಕಾರ್ಯಗಳ ಮತ್ತು ಚಟುವಟಿಕೆಗಳ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿದರು. ಶ್ರೀ ಪ್ರಭಾಕರ್ ಹೆಗ್ಡೆ ಉದ್ಯಮಿಗಳು, ಉಜಿರೆ ಇವರು ಸೇವಾಧಾಮದ ಕಾರ್ಯಗಳ ಬಗ್ಗೆ ಹಾಗೂ ಸಾಧನೆಗಳ ಬಗ್ಗೆ ಹಿತನುಡಿದರು. ಶ್ರೀ ವೆಂಕಟ ರಾಮಕೃಷ್ಣ ನೆಕ್ಕಿನ, ಎ.ಪಿ.ಡಿ. ಬೆಂಗಳೂರು, ಶ್ರೀ ರೋಷನ್ ಹ್ಯೂಮಾನಿಟಿ ಟ್ರಸ್ಟ್ ಬೆಳ್ಮಣ್ಣು, ಆಶಿತ್ ಕಲ್ಲಾಜೆ ಯುವ ತೇಜಸ್ಸು ಟ್ರಸ್ಟ್, ಸುಳ್ಯ, ಇವರು ಸಮಾಜದಲ್ಲಿ ದಿವ್ಯಾಂಗರು ಶಕ್ತಿಶಾಲಿ ಆಗಬೇಕೆಂದು ನುಡಿದರು. ಶ್ರೀ ಕೆ ವಿನಾಯಕ ರಾವ್ ಅಧ್ಯಕ್ಷರು ಸೇವಾಭಾರತಿ ಇವರು ಎಲ್ಲಾ ದಿವ್ಯಾಂಗರು ಸ್ವ-ಉದ್ಯೋಗದ ಮೂಲಕ ಸ್ವಾವಲಂಬಿ ಜೀವನ ನಡೆಸಲಿ ಎಂದು ಪ್ರೋತ್ಸಾಹ ನುಡಿಗಳನ್ನಾಡಿದರು. ಶ್ರೀ. ಕೆ. ಕೃಷ್ಣ ಭಟ್, ಅಧ್ಯಕ್ಷರು, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಕೊಕ್ಕಡ ಹಾಗೂ ಶ್ರೀ ಪ್ರತಾಪ್ ಸಿಂಹ ನಾಯಕ್, ಸದಸ್ಯರು, ವಿಧಾನಪರಿಷತ್, ಬೆಳ್ತಂಗಡಿ, ಕಾರ್ಯಕ್ರಮವನ್ನು ಉದ್ದೇಶಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಎಲ್ಲಾ ಸದಸ್ಯರು ಹಾಗೂ ದಿವ್ಯಾಂಗರು ಮತ್ತು ಪೋಷಕರಿಗೆ ಶುಭ ನುಡಿದರು. ಕಾರ್ಯಕ್ರಮದಲ್ಲಿ ಊರಿನ ಗಣ್ಯ ವ್ಯಕ್ತಿಗಳು, ಹಿರಿಯರು, ದಾನಿಗಳು, ಸಂಘ ಸಂಸ್ಥೆಗಳ ಪ್ರಮುಖರು, ದಿವ್ಯಾಂಗರು ಮತ್ತು ಅವರ ಪೋಷಕರು, ಸಂಸ್ಥೆಯ ಟ್ರಸ್ಟಿಗಳು ಸಲಹಾ ಮಂಡಳಿ ಮತ್ತು ವಿಭಾಗಗಳ ಸರ್ವ ಸದಸ್ಯರು ಹಾಗೂ ಸಂಸ್ಥೆಯ ಪೋಷಕರು, ಊರಿನವರು ಮತ್ತು ಸೇವಾಭಾರತಿಯ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

### 5) ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಉಚಿತ ವೈದ್ಯಕೀಯ ತಪಾಸಣಾ ಶಿಬಿರ




ಉಡುಪಿ : ಸೇವಾಭಾರತಿ ಆಶ್ರಯದಲ್ಲಿ ಡಾ. ಟಿ.ಎಂ.ಎ. ಪೈ ಆಸ್ಪತ್ರೆ, ಉಡುಪಿ, ಕೆ.ಎಂ.ಸಿ. ಮಣಿಪಾಲ್, ರೋಟರಿ ಕ್ಲಬ್ ಮಣಿಪಾಲ್ ಟೌನ್, ದಿವ್ಯಾಂಗ ರಕ್ಷಣಾ ಸಮಿತಿ, ಕೊಡವೂರು, ಡಿಸೆಬಿಲಿಟಿ ಎಂಜಿಯೋಸ್ ಅಲಯನ್ಸ್, ಡಿ.ಡಿ. ಡಬ್ಲ್ಯೂ.ಓ.,

ಸಕ್ಷಮ, ಉಡುಪಿ. ಇವುಗಳ ಸಹಭಾಗಿತ್ವದಲ್ಲಿ ಹಾಗೂ ಸೇವಾಧಾಮ ಪುನಃಶ್ಚೇತನ ಕೇಂದ್ರ ಇದರ ಆಶ್ರಯದಲ್ಲಿ ಮೂರು ದಿನಗಳ ವಸತಿ ಸಹಿತ ಉಚಿತ ವೈದ್ಯಕೀಯ ತಪಾಸಣಾ ಮತ್ತು ಮಾಹಿತಿ ಶಿಬಿರಕ್ಕೆ ಮಾರ್ಚ್ 28ರಂದು ಚಾಲನೆ ನೀಡಲಾಯಿತು. ಒಟ್ಟು 9 ಶಿಬಿರಾರ್ಥಿಗಳು ಈ ಶಿಬಿರದ ಸದುಪಯೋಗ ಪಡೆದುಕೊಂಡರು.

## ಕ್ಷೇತ್ರ ರಾಜಕೀಯ ನಾಯಕರ ಬೆಂಬಲ

**ಬೆಳ್ತಂಗಡಿ ತಾಲೂಕಿನಲ್ಲಿರುವ 70 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಶಾಸಕ ಹರೀಶ್ ಪೂಂಜರಿಂದ ಕಿಟ್ ವಿತರಣೆ**




ದಿನಾಂಕ 30/05/2020 ಬೆಳ್ತಂಗಡಿ : ಸೇವಾಭಾರತಿ ಇದರ ಅಂಗಸಂಸ್ಥೆಯಾದ ಸೇವಾಧಾಮದ ಮುಖಾಂತರ ಬೆಳ್ತಂಗಡಿ ತಾಲೂಕಿನ ಬೆನ್ನುಮೂಳೆ ಮುರಿತಕ್ಕೊಳಗಾದ 70 ದಿವ್ಯಾಂಗರಿಗೆ ಬೆಳ್ತಂಗಡಿಯ ಶಾಸಕರಾದ ಹರೀಶ್ ಪೂಂಜರವರು ಸುಮಾರು 1.40 ಲಕ್ಷ ವೆಚ್ಚದಲ್ಲಿ ಔಷಧಿ ಮತ್ತು ದಿನಸಿ ಸಾಮಾಗ್ರಿಗಳ ಕಿಟ್‌ನ್ನು ವಿತರಿಸಿರುತ್ತಾರೆ. ಬೆನ್ನುಮೂಳೆ ಮುರಿತಕ್ಕೊಳಗಾದ ಕನ್ಯಾಡಿಯ ಜಗದೀಶ್‌ರವರಿಗೆ ಸಾಂಕೇತಿಕವಾಗಿ ಕಿಟ್ ವಿತರಿಸುವ ಮೂಲಕ ಶಾಸಕರು ಈ ಕಾರ್ಯಕ್ಕೆ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್‌ರವರು ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಸೇವಾಭಾರತಿಯ ಟ್ರಸ್ಟಿಗಳು, ಸಿಬ್ಬಂದಿಗಳು, ಊರಿನ ಗಣ್ಯರು, ಊರಿನವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನಮ್ಮ ಮುಂದಿನ ಹಂತವಾಗಿ ಸುಳ್ಯದಲ್ಲಿರುವ 26 ಮಂದಿಗೆ, ಪುತ್ತೂರಿನಲ್ಲಿರುವ 16 ಮಂದಿಗೆ ಬಂಟ್ವಾಳದ 35 ಮಂದಿಗೆ, ಕಿಟ್‌ಗಳನ್ನು ಒದಗಿಸಿಕೊಡಬೇಕೆಂಬ ಮನವಿಯನ್ನು ಆಯಾಯ ತಾಲೂಕಿನ ಶಾಸಕರಿಗೆ ವಿನಂತಿಯನ್ನು ಸಲ್ಲಿಸಿದ್ದು, ಶಾಸಕರುಗಳು ಪೂರಕವಾಗಿ ಸ್ಪಂದಿಸಲು ಒಪ್ಪಿರುವುದು ನಮ್ಮ ಪ್ರಯತ್ನಕ್ಕೆ ಇನ್ನಷ್ಟು ಇಂಬು ನೀಡಿರುತ್ತದೆ.



ಶ್ರೀ ಸಂಜೀವ ಮಠಂದೂರು
ಶಾಸಕರು, ಪುತ್ತೂರು



ಶ್ರೀ ರಾಜೇಶ್ ನಾಯಕ್
ಶಾಸಕರು, ಬಂಟ್ವಾಳ



ಶ್ರೀ ಅಂಗಾರ, ಶಾಸಕರು, ಸುಳ್ಯ

ದಿನಾಂಕ 04/06/2020 ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಮತ್ತು ಆಯಾಯ ತಾಲೂಕಿನ ಶಾಸಕರನ್ನು ಭೇಟಿ ಮಾಡಿ ಮನವಿ ಸಲ್ಲಿಸಲು ನಮ್ಮ ಸಮಿತಿಯು ಸಿದ್ಧವಾಗಿದ್ದು ಭೇಟಿಗೆ ಸಮಯವನ್ನು ನಿರೀಕ್ಷಿಸುತ್ತಿದ್ದೇವೆ. ಕರಾವಳಿಯ ಭಾಗದಲ್ಲಿರುವ ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಪ್ರೋತ್ಸಾಹ, ನೀಡಿ, ಅವರನ್ನು ಈ ಮುಖ್ಯವಾಹಿನಿಯಲ್ಲಿ ನಮ್ಮೊಂದಿಗೆ ತೊಡಗುವಂತೆ ಮಾಡಬೇಕಾಗಿರುವುದು ಪ್ರತಿಯೊಬ್ಬ ಸಮರ್ಥರ, ಸಂಘ–ಸಂಸ್ಥೆಗಳ, ಸರಕಾರದ ಇಲಾಖೆಗಳ ಕರ್ತವ್ಯ. ಈ ನಿಟ್ಟಿನಲ್ಲಿ ಕೊಕ್ಕಡ ಗ್ರಾಮದ ಸೌತಡ್ಕದಲ್ಲಿ ಕಾರ್ಯಾಚರಿಸುತ್ತಿರುವ ಸೇವಾಧಾಮ ಎಂಬ ಬೆನ್ನುಮೂಳೆ ಮುರಿತಗೊಂಡವರಿಗಾಗಿ ಅನೇಕ ದಾನಿಗಳ, ಸಂಘ–ಸಂಸ್ಥೆಗಳ ಸಹಕಾರದಿಂದ, ಪುನಶ್ಚೇತನ ಕೇಂದ್ರವು ತನ್ನ ಗುರಿಯ ಸಫಲತೆಗೆ ಚಿಕ್ಕಪುಟ್ಟ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

# ದಾನಿಗಳು, ಭಾಗಿದಾರರು ಮತ್ತು ಸಂಘ–ಸಂಸ್ಥೆಗಳ ಸಹಕಾರ

## 1) ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಿಂದ ನೆರವು




ದಿನಾಂಕ 05/06/2020 ಸೇವಾಭಾರತಿ ಬೆಳ್ತಂಗಡಿ ತಾಲೂಕು ಇದರ ಅಂಗ ಸಂಸ್ಥೆಯಾದ ಸೇವಾಧಾಮ, ಬೆನ್ನುಮೂಳೆ ಮುರಿತಕ್ಕೊಳಗಾದವರ ಪುನಶ್ಚೇತನ ಕೇಂದ್ರಕ್ಕೆ ಮುಂಡಾಜೆ ಪ್ರಾಥಮಿಕ ಕೃಷಿ ಪತ್ತಿನ ಸಂಘದಿಂದ ರೂ. 25,000 ಸೇವಾಭಾರತಿಯ ಅಧ್ಯಕ್ಷರಾದ ಕೆ ವಿನಾಯಕ ರಾವ್ ಅವರಿಗೆ ಹಸ್ತಾಂತರಿಸಲಾಯಿತು ಸಹಕಾರ ಸಂಘದ ಅಧ್ಯಕ್ಷ ಜನಾರ್ಧನ ಗೌಡ, ಉಪಾಧ್ಯಕ್ಷ ಪ್ರಕಾಶ್ ನಾರಾಯಣ ರಾವ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಾರಾಯಣ ಫಡ್ಕೆ ಮತ್ತು ಸಂಘದ ನಿರ್ದೇಶಕರು ಹಾಗೂ ಸೇವಾಧಾಮದ ಸಿಬ್ಬಂದಿಗಳು ಉಪಸ್ಥಿತರಿದ್ದರು.

## 2) ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಿಂದ ನೆರವು:

ದಿನಾಂಕ 11/06/2020 ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಧರ್ಮಸ್ಥಳ ಪ್ರಾಥಮಿಕ ಕೃಷಿ ಪತ್ತಿನ ಸಂಘದಿಂದ ರೂ. 12,500/– ಮೌಲ್ಯದ ಚೆಕ್ ಅನ್ನು ಸಹಕಾರ ಸಂಘದ ಅಧ್ಯಕ್ಷ ಹರಿದಾಸ್ ಗಾಂಭೀರ್‌ರವರು ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಅವರಿಗೆ ಹಸ್ತಾಂತರಿಸಿದರು.

## 3) ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದಿಂದ ನೆರವು :

ದಿನಾಂಕ 19/06/2020 ಸೇವಾಧಾಮಕ್ಕೆ ಹತ್ಯಡ್ಕ ಪ್ರಾಥಮಿಕ ಕೃಷಿ ಪತ್ತಿನ ಸಂಘದಿಂದ ರೂ. 10,000 ನೆರವಿನ ಚೆಕ್ ಅನ್ನು ಸಹಕಾರ ಸಂಘದ ಅಧ್ಯಕ್ಷ ಶ್ರೀಯುತ ಕೆ. ರಾಘವೇಂದ್ರ ನಾಯಕ್ ಬರ್ಗುಳ ಸೇವಾಭಾರತಿಯ ಅಧ್ಯಕ್ಷರಾದ ಕೆ. ವಿನಾಯಕ ರಾವ್ ಅವರಿಗೆ ಹಸ್ತಾಂತರಿಸಿದರು.

## ದುರ್ಗಾ ಮಾತೃ ಮಂಡಳಿ ವತಿಯಿಂದ ವರಮಹಾಲಕ್ಷ್ಮಿ ಪೂಜೆ



ದಿನಾಂಕ : 31/07/2020 ಸೇವಾಭಾರತಿಯ ವಿಭಾಗದ ದುರ್ಗಾ ಮಾತೃ ಮಂಡಳಿ ವತಿಯಿಂದ ವರ್ಷದ ವರಮಹಾಲಕ್ಷ್ಮಿ ಪೂಜೆಯನ್ನು ಸೇವಾಭಾರತಿಯ ಪ್ರಧಾನ ಕಛೇರಿಯಲ್ಲಿ ಸಾಂಪ್ರದಾಯಕವಾಗಿ ನಡೆಯಿತು. ಸಮಿತಿಯ 20 ಮಂದಿ ಸದಸ್ಯರು ಪೂಜೆಯಲ್ಲಿ ಪಾಲ್ಗೊಂಡಿದ್ದರು.

## ಫಲಾನುಭವಿಗಳ ಸ್ವ-ಉದ್ಯೋಗಕ್ಕೆ ಸಹಕಾರ

### ಸೇವಾಧಾಮದಿಂದ ಸ್ವಉದ್ಯೋಗಕ್ಕೆ ಸಹಕಾರ



ಸೇವಾಧಾಮ ಪುನಶ್ಚೇತನ ಕೇಂದ್ರದಿಂದ ಈ ವರ್ಷ ಸ್ವ-ಉದ್ಯೋಗ ಯೋಜನೆಯಡಿ ಸುಳ್ಯ ತಾಲೂಕಿನ ಕನಕಮಜಲು ನಿವಾಸಿ ಮಾಧವ ಗೌಡ ಇವರ

ಕಟ್ಲೇರಿ ಅಂಗಡಿಗೆ 20,000 ರೂಪಾಯಿಯನ್ನು ಸೇವಾಭಾರತಿಯ ಅಧ್ಯಕ್ಷ ಕನ್ಯಾಡಿ ವಿನಾಯಕ ರಾವ್ ಹಸ್ತಾಂತರಿಸಿ ಶುಭ ಹಾರೈಸಿದರು. ಕಳೆದ 4 ವರ್ಷಗಳಿಂದ ಮಾಧವರವರು ಬೆನ್ನುಮೂಳೆ ಮುರಿತದಿಂದಾಗಿ ತೀರಾ ಆರ್ಥಿಕ ಕಷ್ಟಗಳನ್ನು ಅನುಭವಿಸುತ್ತಿದ್ದರು. ಅವರ ಮನೆಯಂಗಳದಲ್ಲಿ ಚಿಕ್ಕ ಅಂಗಡಿ ಮಾಡುವ ಕನಸು ಕಂಡ ಮಾಧವರಿಗೆ ಸೇವಾಧಾಮವು ಬೆನ್ನೆಲುಬಾಗಿ ನಿಂತು ಸಹಕರಿಸಿತು. ಈ ಮೊದಲು ಸೇವಾಧಾಮದಲ್ಲಿ ಅವರು ಮೂರು ತಿಂಗಳ ಕಾಲ ಪುನಶ್ಚೇತನಗೊಂಡು ತೆರಳಿದ್ದರು. ಈ ಸಂದರ್ಭದಲ್ಲಿ ಫಂಡ್ ರೈಸಿಂಗ್ ಮ್ಯಾನೇಜರ್ ಚರಣ್ ಕುಮಾರ್ ಎಮ್. ಹಾಗೂ ಮಾಧವರ ಕುಟುಂಬಸ್ಥರು ಹಾಜರಿದ್ದರು.

# ನಮ್ಮ ಹೆಮ್ಮೆ ಮತ್ತು ಸಾಧನೆ

**ಶ್ರೀ ಕೆ. ವಿನಾಯಕ ರಾವ್‌ರವರಿಗೆ ಇಂಡಿಯನ್ ಸೀನಿಯರ್ ಚೇಂಬರ್ ವತಿಯಿಂದ ರಾಷ್ಟ್ರ ಪ್ರಶಸ್ತಿ.**



ದಿನಾಂಕ : 25 ಜನವರಿ 2021ರಂದು ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಇವರು ಸತತವಾಗಿ ಹಲವಾರು ಸೇವಾಕಾರ್ಯದಲ್ಲಿ ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಮಾಜಕ್ಕೆ ಮಾದರಿಯಾಗಿದ್ದಾರೆ. ಅವರ ಸಮಾಜ ಸೇವೆಯನ್ನು ಪರಿಗಣಿಸಿ **"ಜವಾಬ್ದಾರಿಯುತ ಹಾಗೂ ಕ್ರಿಯಾಶೀಲ ನಾಗರಿಕ"** ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ಬೆಳ್ತಂಗಡಿಯ ಇಂಡಿಯನ್ ಸೀನಿಯರ್ ಚೇಂಬರ್‌ನ ರಾಷ್ಟ್ರೀಯ ಆಡಳಿತ ಮಂಡಳಿಯ ಸದಸ್ಯರು ಪ್ರಮೋದ್ ಆರ್. ನಾಯಕ್, ಮಾಜಿ ಅಧ್ಯಕ್ಷರಾದ ಪಿ. ಪಿ. ಜೋಯ್, ಮಾಜಿ ಕಾರ್ಯದರ್ಶಿಯಾದ ಚಂದ್ರಶೇಖರ್ ಖೇದೆ, ಮಾಜಿ

ಖಜಾಂಚಿಯಾದ ಯಶವಂತ ಪಟವರ್ಧನ್ ಮತ್ತು ಅಶೋಕ್ ಕುಮಾರ್ ಬಿ. ಪಿ., ಮೋಲ್ಸಿ ಜೋಯ್‌ರವರು ಕೆ. ವಿನಾಯಕ ರಾವ್ ಅವರ ನೂತನ ಮನೆಯ ಗೃಹಪ್ರವೇಶದಂದು ಹಸ್ತಾಂತರಿಸಿದರು. ಕಾರ್ಯಕ್ರಮದಲ್ಲಿ ಗಣ್ಯರುಗಳಾದ ವಿಧಾನ ಪರಿಷತ್‌ನ ಸದಸ್ಯರಾದ ಶ್ರೀ ಕೆ. ಪ್ರತಾಪಸಿಂಹ ನಾಯಕ್, ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್ ಸೌತಡ್ಕದ ಅಧ್ಯಕ್ಷರಾದ ಶ್ರೀ ಕೃಷ್ಣ ಭಟ್, ಸೇವಾಭಾರತಿಯ ಉಪಾಧ್ಯಕ್ಷರಾದ ಶ್ರೀ ಗಿರೀಶ್ ಕೆ. ಯು. ಮತ್ತು ಇತರ ಗಣ್ಯರು ಹಾಗೂ ಮನೆಯವರು, ಸೇವಾಭಾರತಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ನಮ್ಮೊಂದಿಗೆ ಈ ವರ್ಷ ಕೈ ಜೋಡಿಸಿದ ಸಂಘ ಸಂಸ್ಥೆಗಳು

- **ಸೌತಡ್ಕ ಶ್ರೀ ಮಹಾಗಣಪತಿ ಸೇವಾ ಟ್ರಸ್ಟ್, ಕೊಕ್ಕಡ**
- **ರೋಟರಿ ಕ್ಲಬ್, ಬೆಳ್ತಂಗಡಿ**
- **ಅರ್ಕುಳ ಚಾರಿಟೇಬಲ್ ಟ್ರಸ್ಟ್, ಫರಂಗಿಪೇಟೆ**
- **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ( ನಿ.) ಧರ್ಮಸ್ಥಳ**
- **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ( ನಿ.) ಹತ್ಯಡ್ಕ**
- **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ಮುಂಡಾಜೆ**
- **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ( ನಿ.) ಅಳದಂಗಡಿ**
- **ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ( ನಿ.) ಸುಳ್ಯ**
- **ಪ್ರಾಥಮಿಕ ಕೃಷಿ ಪತ್ತಿನ ಪ್ರಾಥಮಿಕ ಸಹಕಾರಿ ಸಂಘ ( ನಿ.) ಕಳಿಯ**
- **ಸಮರ್ಥನಮ್ ಅಂಗವಿಕಲರ ಸಂಸ್ಥೆ, ಬೆಂಗಳೂರು**
- **ರೋಟರಿ ಕ್ಲಬ್, ಪುತ್ತೂರು**
- **ಬ್ಯಾಂಕ್ ಆಫ್ ಬರೋಡ, ಶಿಶಿಲ**
- **ಹ್ಯೂಮಾನಿಟಿ ಟ್ರಸ್ಟ್, ಬೆಳ್ಮಣ್**
- **ಶಿಶು ನಿವಾಸ, ಬೆಂಗಳೂರು**
- **ಕೆ.ಎಂ.ಸಿ, ಹಾಸ್ಪಿಟಲ್ ಮಣಿಪಾಲ**
- **ಬೆನಕ ಆಸ್ಪತ್ರೆ, ಉಜಿರೆ**
- **ದಿವ್ಯಾಂಗ ರಕ್ಷಣಾ ಸಮಿತಿ, ಕೊಡವೂರು**
- **ಸಕ್ಷಮ, ಉಡುಪಿ ಜಿಲ್ಲೆ**
- **ನವಚೇತನ, ಚಾರಿಟೇಬಲ್ ಟ್ರಸ್ಟ್ ಫಾರ್ ಡೀಸೆಬಲ್ಸ್ (ರಿ.) ರಾಮನಗರ**
- **ಡಿ. ಎನ್. ಎ, ಬೆಂಗಳೂರು**
- **ಎ. ಪಿ. ಡಿ, ಬೆಂಗಳೂರು**
- **ಎ. ಸಿ. ಇ ಮ್ಯಾನುಫ್ಯಾಕ್ಚರಿಂಗ್ ಪ್ರೈವೇಟ್ ಲಿಮಟೆಡ್, ಬೆಂಗಳೂರು**
- **ಧ್ವನಿ ಫೌಂಡೇಶನ್, ಬೆಂಗಳೂರು**

- ☞ ಶ್ರೀ ರಾಜೇಶ್ ಕಾಟನ್ ಆಗ್ರೋ ಇಂಡಸ್ಟ್ರೀಸ್, ರಾಣೇಬೆನ್ನೂರ್
- ☞ ಡಿಯರ್ ಲೈಫ್ ಎಂಪವರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್.
- ☞ ಉಪ್ಪಿನಂಗಡಿ ಹವ್ಯಕ ಮಂಡಲ
- ☞ ಕಮ್ಮಾಜೆ ಇಂಡಸ್ಟ್ರೀಸ್, ಬೆಂಗಳೂರು
- ☞ ರೋಟರಿ ಕ್ಲಬ್ ಮಣಿಪಾಲ್ ಟೌನ್, ಉಡುಪಿ
- ☞ ಡಾ. ಟಿ.ಎಂ.ಎ. ಪೈ ಆಸ್ಪತ್ರೆ, ಉಡುಪಿ
- ☞ ಶುಭಪ್ರಧಾ ಟ್ರಸ್ಟ್, ಉಡುಪಿ
- ☞ ಧಾನ್ಯಲಕ್ಷ್ಮಿ ರೈಸ್ ಮಿಲ್, ಪುತ್ತೂರು, ಉಡುಪಿ
- ☞ ಟೊಯೋಡಾ ಗೋಸಾಯಿ ಸೌತ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಬೆಂಗಳೂರು
- ☞ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ, ಲೇಡಿ ಗೋಷನ್ ಆಸ್ಪತ್ರೆ, ಮಂಗಳೂರು
- ☞ ಕೆನರಾ ಸ್ಪೈನ್ ಫೋರಂ, ಮಂಗಳೂರು
- ☞ ಶ್ರೀ ಶ್ರೀ ಶ್ರೀ ರಾಘವೇಂದ್ರ ಭಾರತಿ ಮಹಾಸ್ವಾಮೀಜಿ ಸಂಸ್ಥಾನಮ್, ಹೊಸನಗರ
- ☞ ಪ್ರೊ–ವಿಷನ್ ಏಶಿಯ, ಬೆಂಗಳೂರು
- ☞ ಶ್ರೀ ಕ್ಷೇತ್ರ ಸುಬ್ರಮಣ್ಯ ದೇವಸ್ಥಾನ, ಸುಬ್ರಮಣ್ಯ
- ☞ ಶ್ರೀ ಷಣ್ಮುಖ ಸುಬ್ರಮಣ್ಯ ಮಹಾವಿಷ್ಣು, ದೇವಸ್ಥಾನ, ಕೆಮ್ಮಿಂಜೆ, ಪುತ್ತೂರು
- ☞ ಭಾರತಿ ಎಲೆಕ್ಟ್ರಿಕಲ್ಸ್, ಬೆಂಗಳೂರು
- ☞ ರೆಡ್ ಕ್ರಾಸ್ ಸೊಸೈಟಿ, ಬೆಳ್ತಂಗಡಿ

---

## ನಮ್ಮ ಸಂಸ್ಥೆಯ ಮಹಾಪೋಷಕರು

ಶ್ರೀ ಕೆ. ಕೆ. ಪ್ರಕಾಶ್, ಬೆಂಗಳೂರು
ಶ್ರೀ ಪಿ. ಬಾಲಕೃಷ್ಣ ರಾವ್, ಬೆಂಗಳೂರು
ಶ್ರೀ ಪಿ. ನಾಗೇಶ್ ರಾವ್, ಮುಂಬೈ
ಶ್ರೀ ಕೆ. ವಿನಾಯಕ ರಾವ್, ಕನ್ಯಾಡಿ
ಶ್ರೀ ಕೆ. ಪುರಂದರ ರಾವ್, ದೊಂಡೋಲೆ, ಧರ್ಮಸ್ಥಳ
ಶ್ರೀಮತಿ ಕವಿತಾ ಎಂ. ಪಿ., ಬೆಂಗಳೂರು
ಶ್ರೀ ಕೆ. ಎನ್. ರಾಜು, ಬೆಂಗಳೂರು
ಶ್ರೀ ಲಕ್ಷ್ಮೀನಾರಾಯಣ ರಾವ್, ಜೋಡುಸ್ಥಾನ, ಧರ್ಮಸ್ಥಳ
ಶ್ರೀ ಗಣೇಶ್ ಪಿ. ಐತಾಳ್, ಕೊಕ್ಕಡ
ಶ್ರೀ ಮಧ್ವಮೂರ್ತಿ ಪುತ್ತೂರು, ಉಡುಪಿ
ಶ್ರೀ ಡಿ. ಸೂರಜ್ ರೇವಣ್ಣ, ಹಾಸನ
ಶ್ರೀ ಪಿ. ನಾರಾಯಣ ಕಾರಂತ್, ಬೆಂಗಳೂರು
ಸ್ಥಳೀಯ ಸೇವಾನಿಧಿ ಮತ್ತು ವೈಯಕ್ತಿಕ ದಾನಿಗಳು

# SEVA BHARATHI (REGD)

OFFICE: SEVANIKETHANA, KANYADY II

DHARMASTHALA POST AND VILLAGE, DAKSHINA KANNADA, KARNATAKA -574216

## INCOME AND EXPENDITURE ACCOUNT FOR THE PERIOD ENDING 31-03-2021

| Expenditure | | Amount | Income | Amount |
|---|---|---|---|---|
| **To Aarogya Bharathi Project** | | | Donation Received | 36,86,254.70 |
| Blood Donation Camp Expenses | 1,990.00 | | Interest Income | 29,443.36 |
| Ambulance Services | 33,206.00 | 35,196.00 | Income from Ambulance Services | 46,947.00 |
| **To Durga Matru Mandali Project** | | | | |
| Tailoring Course Expenses | | 3,000.00 | | |
| **To Sevadhama Project** | | | | |
| Inmates Rehabilitation Expenses | 3,16,883.00 | | Rehabilitation Fees | 3,78,830.00 |
| Office Maintanance | 3,54,014.00 | | | |
| Wheel Chair Distribution | 4,32,509.00 | | Donation for Wheel Chair | 1,55,000.00 |
| Medical Support | 80,167.00 | | | |
| Medical Camp Expenses | 71,963.00 | | | |
| Medical Kit Distribution | 68,104.00 | | | |
| Staff Salary | 6,94,540.00 | | | |
| Building Maintanance | 1,38,684.00 | | | |
| Training Expenses | 3,549.00 | 21,60,413.00 | | |
| **To Other Programs and Projects** | | | | |
| Annual Day Expenses | 1,13,210.00 | | Donation for Grocery kits | 52,000.00 |
| Grocery Kit Distribution | 1,26,408.00 | | Honey Bee | 20,320.00 |
| Beekeeping Expenses | 76,670.00 | | | |
| Solar Home Lighting Program | 35,000.00 | | | |
| Financial Assistance | 2,40,000.00 | | | |
| livelihood expenses | 1,86,329.00 | 7,77,617.00 | | |
| **Office Administration Expenses** | | | | |
| Sevabharathi Office Maintanance | 3,81,891.00 | | | |
| Staff Salary | 3,40,256.00 | | | |
| Interest on Loan | 37,317.33 | | | |
| Bank Charges | 23,708.71 | 7,83,173.04 | | |
| **To Depreciation written off (As per Schedule)** | | 4,63,938.00 | | |
| **Excess of Income over Expenditure** | | 1,45,458.02 | | |
| **TOTAL** | | **43,68,795.06** | **TOTAL** | **43,68,795.06** |

**Place: Kanyady**

**Date : 13-09-2021**

**For Sevabharathi Trust**

**As per my Audit Report**

**PRESIDENT** **SECRETARY** **TREASURER**

CA. PRABHAKAR NARASIMHA NAYA[K] B.Com, LL.B

M.No.19854

CHARTERED ACCOUNTANT

UDUPI - 576 101

SEVA BHARATHI (R) DHARMASTHALA VILLAGE & POST-574216

# SEVA BHARATHI (REGD)

OFFICE: SEVANIKETHANA, KANYADY II

DHARMASTHALA POST AND VILLAGE, DAKSHINA KANNADA, KARNATAKA -574216

**BALANCE SHEET AS ON 31-03-2021**

| Funds & Liabilities | | Amount | Assets | | Amount |
|---|---|---|---|---|---|
| **General Fund** | 21,53,959.68 | | **Fixed Assets (As per schedule)** | | |
| **Add:** Excess of Income | | | **SEVA BHARATHI** | | |
| over Expenditure | 1,45,458.02 | 22,99,417.70 | Office Building | 2,85,829.00 | |
| | | | Ambulance | 1,36,991.00 | |
| **Building & Infrastructure Fund** | | 8,00,000.00 | Camera | 2,564.00 | |
| | | | Computer | 8,113.00 | |
| **Grant for Solar** | | 8,33,000.00 | Electrical Fittings | 76,886.00 | |
| | | | Tailoring Machine | 1,25,905.00 | |
| **Loan** | | | Furniture | 43,164.00 | |
| Principal | 6,40,897.83 | | Vessels & Dinning Table | 53,315.00 | |
| Interest | 37,317.33 | 6,78,215.16 | Motor Car | 8,32,696.00 | |
| | | | Solar | 6,66,400.00 | 22,31,863.00 |
| Bills Payable | | 2,76,687.00 | **SEVADHAMA** | | |
| | | | Medical Equipments | 47,258.00 | |
| | | | Office Equipment | 2,41,810.00 | |
| | | | Beds and Cots | 29,111.00 | |
| | | | Machinery | 2,72,822.00 | |
| | | | Motor Cycle | 79,751.00 | |
| | | | Refrigerator | 21,546.00 | |
| | | | Wheel Chair | 21,238.00 | |
| | | | Camera | 39,296.00 | |
| | | | Inverter | 11,794.00 | 7,64,626.00 |
| | | | **Fixed Deposit** | | |
| | | | Deposit with Canara Bank | | 12,00,000.00 |
| | | | **Receivables** | | |
| | | | Receivable from Naveen | | 11,893.00 |
| | | | **Closing Balances** | | |
| | | | Cash in Hand | 3,104.00 | |
| | | | Cash at Bank | 4,35,833.86 | |
| | | | Cheques in hand | 2,40,000.00 | 6,78,937.86 |
| **TOTAL** | | **48,87,319.86** | **TOTAL** | | **48,87,319.86** |

**Place: Kanyady**

**Date : 13-09-2021**

**For Sevabharathi Trust**

**As per my Audit Report**

**PRESIDENT** **SECRETARY** **TREASURER**

CA. PRABHAKAR NARASIMHA NAYAK B.Com, LL.B, F.C.A.
M.No.19354
CHARTERED ACCOUNTANT
UDUPI - 576 101

## 2021–22ನೇ ಸಾಲಿನ ಸೇವಾ ಕಾರ್ಯಗಳ ವಿವರ :

* ಎರಡನೇ ಕೋವಿಡ್ ಅಲೆಯ ಸಂದರ್ಭದಲ್ಲಿ ಕೋವಿಡ್ ಸೋಂಕಿತರಿಗೆ ತಾಲೂಕಿನಾದ್ಯಂತ ಉಚಿತ ಆಂಬುಲೆನ್ಸ್ ಸೇವೆ.
* ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಮಿಷನ್ – 50 ಯೋಜನೆಯಡಿ ಒತ್ತಡ ಗಾಯ ನಿರ್ವಹಣ ಶಿಬಿರ.
* ಕೋವಿಡ್ ಸಂದರ್ಭದಲ್ಲಿ ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಯ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳ ಮನೆಗೆ ತೆರಳಿ ಔಷಧಿ ಹಾಗೂ ದಿನಸಿ ಕಿಟ್‌ಗಳ ವಿತರಣೆ.
* ಬೆನ್ನುಹುರಿ ಅಪಘಾತಕ್ಕೊಳಗಾದ 4 ಮಂದಿಗೆ ನಿಯೋ ಫ್ಲೈ ಗಾಲಿ ಕುರ್ಚಿ ಹಾಗೂ ಓರ್ವರಿಗೆ ನಿಯೋ ಬೋಲ್ಟ್ ವಿತರಣೆ.
* ವಿಶ್ವ ಬೆನ್ನುಹುರಿ ಅಪಘಾತ ದಿನಾಚರಣೆ ಅಂಗವಾಗಿ ಚಾರ್ಮಾಡಿ ಘಾಟ್, ಸೇವಾಧಾಮ ಹಾಗೂ ಉಡುಪಿಯಲ್ಲಿ ಜಾಗೃತಿ ಜಾಥಾ.
* ಉಡುಪಿ ಜಿಲ್ಲಾಡಳಿತದ ಸಹಕಾರದೊಂದಿಗೆ 'ಆರೋಗ್ಯ ಸ್ಪರ್ಶ' ಯೋಜನೆಗೆ ಚಾಲನೆ.
* ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಮೂರು ಜಿಲ್ಲೆಗಳಲ್ಲಿ 4 ಉಚಿತ ವೈದ್ಯಕೀಯ ತಪಾಸಣಾ ಶಿಬಿರ ಹಾಗೂ ಜಾಗೃತಿ ಕಾರ್ಯಗಾರ.
* GiftAbled Foundation, Bengaluru ವತಿಯಿಂದ 35 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ಫಲಾನುಭವಿಗಳನ್ನು ಗುರುತಿಸಿ, ತರಬೇತಿ ನೀಡಿ ಪ್ರತಿಯೊಬ್ಬ ಫಲಾನುಭವಿಗಳಿಗೂ ಎರಡು ಜೇನುಪೆಟ್ಟಿಗೆಯ ನೀಡಿ ಸ್ವ–ಉದ್ಯೋಗಕ್ಕೆ ಪ್ರೋತ್ಸಾಹ.
* ನುರಿತ ಫಿಸಿಯೋಥೆರಪಿಸ್ಟ್‌ಗಳಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳ ಮನೆಗೆ ಭೇಟಿ ನೀಡಿ ಆರೋಗ್ಯ ತಪಾಸಣೆ ಹಾಗೂ ಒತ್ತಡ ಗಾಯ ನಿರ್ವಹಣೆ.
* 2 ಮಂದಿ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ವೈದ್ಯಕೀಯ ತಪಾಸಣೆಗೆ ಒಳಪಡಿಸಿ ಶಸ್ತ್ರಚಿಕಿತ್ಸೆಗೆ ಧನಸಹಾಯ.
* ಸೇವಾಧಾಮದಲ್ಲಿ ಪುನಶ್ಚೇತನಗೊಳ್ಳುವ ಫಲಾನುಭವಿಗಳಿಗೆ ಹಾಗೂ ಪೋಷಕರಿಗೆ ನುರಿತ ತಜ್ಞರಿಂದ ಆಪ್ತ ಸಮಾಲೋಚನೆ.
* ಡಾ. ಸುಜಾತ ಸರಳಾಯರಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳ ಮೇಲೆ ಯೋಗ ಚಿಕಿತ್ಸೆಯ ಮೂಲಕ ಸಂಶೋಧನೆ.
* ಕೆನರಾ ಸ್ಪೈನ್ ಫಾರಂ ಮಂಗಳೂರು ಇವರ ವತಿಯಿಂದ ನಮ್ಮ ಸಂಸ್ಥೆಯ ಸಿಬ್ಬಂದಿಗಳಿಗೆ ಬೆನ್ನುಹುರಿ ಅಪಘಾತಕ್ಕೊಳಗಾದ ವ್ಯಕ್ತಿಗಳ ಗಾಯ ನಿರ್ವಹಣೆ ಕುರಿತು ತಜ್ಞರಿಂದ ತರಬೇತಿ.
* 'ಆರೋಗ್ಯ ಬಿಂದು' ಯೋಜನೆಯಡಿಯಲ್ಲಿ ಆರು ಜಿಲ್ಲೆಗಳಲ್ಲಿ ಗುರುತಿಸಲ್ಪಟ್ಟ ಅಪಘಾತಕ್ಕೊಳಗಾದ ವ್ಯಕ್ತಿಗಳಿಗೆ ಅತಿ ಕಡಿಮೆ ದರದಲ್ಲಿ Self Care Kit ನೀಡುವ ಕಾರ್ಯಕ್ರಮಕ್ಕೆ ಚಾಲನೆ ಹಾಗೂ ರಾಜ್ಯದಾದ್ಯಂತ ವಿಸ್ತರಣೆಯ ಯೋಜನೆ.

# ಪತ್ರಿಕಾ ವರದಿಗಳು

## ‘ಅಂಗವಿಕಲರಿಗೆ ತ್ರಿಚಕ್ರ ವಾಹನ ಸೌಲಭ್ಯ’

**ಬೆಳ್ತಂಗಡಿ, ಮಾ. 14:** ಅಂಗವಿಕಲರಿಗೆ ಬೇರೆ ಬೇರೆ ಆಯಾಮಗಳಲ್ಲಿ ಸೇವಾ ಭಾರತಿ ತಂಡ ಸೇವಾ ಕಾರ್ಯ ನೀಡುತ್ತಾ ಬಂದಿದೆ. ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದ ಈಗಾಗಲೇ 13 ಅಂಗವಿಕಲರಿಗೆ ತ್ರಿಚಕ್ರ ವಾಹನ ವಿತರಿಸಲಾಗಿದೆ. ಬರೋಡ ತುಳು ಸಂಘದ ದಾನಿ ಶಶಿಧರ ಶೆಟ್ಟಿ ಅವರ ನೆರವಿನಿಂದ ತಾಲೂಕಿನ ಎಲ್ಲ ಅರ್ಹ ಅಂಗವಿಕಲರಿಗೆ ಜೀವನ ನಿರ್ವಹಣೆ ಗಾಗಿ ಪೂರ್ಣ ಪ್ರಮಾಣದಲ್ಲಿ ತ್ರಿಚಕ್ರ ವಾಹನಗಳನ್ನು ವಿತರಿಸಲಾಗುವುದು ಎಂದು ಶಾಸಕ ಹರೀಶ್ ಪೂಂಜ ಹೇಳಿದರು.



ಕನ್ಯಾಡಿ ಹಿ.ಪ್ರಾ. ಶಾಲಾ ಸಭಾಭವನದಲ್ಲಿ ಹರೀಶ್ ಪೂಂಜ ಮಾತನಾಡಿದರು.

ಕನ್ಯಾಡಿಹಿ.ಪ್ರಾ.ಶಾಲಾಸಭಾಭವನದಲ್ಲಿ ಬೆಳ್ತಂಗಡಿ ತಾಲೂಕು ಸೇವಾಭಾರತಿಯ 16ನೇ ವಾರ್ಷಿಕೋತ್ಸವ ಮತ್ತು ವಿವಿಧ ಸೇವಾ ಕಾರ್ಯಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ವಿವಿಧ ಸೇವಾ ಸೌಲಭ್ಯ ವಿತರಿಸಿ, ಸೇವಾಭಾರತಿಯ ಗೌರವಾರ್ಪಣೆ ಸ್ವೀಕರಿಸಿ ಮಾತನಾಡಿದರು.

ಮುಖ್ಯ ಅತಿಥಿ ವಿ.ಪ.ಸದಸ್ಯ ಪ್ರತಾಪಸಿಂಹ ನಾಯಕ್ ಅಕ್ಯುಪ್ರೆಶರ್ ಚಿಕಿತ್ಸೆಗೆ ಚಾಲನೆ ನೀಡಿ, ಡಾ। ಸುಜಾತಾ ಸರಳಾಯ ಅವರು ಬೆನ್ನುಮೂಳೆ ಮುರಿತಕ್ಕೊಳಗಾದವರಿಗೆ ಯೋಗ, ವ್ಯಾಯಾಮ ಹಾಗೂ ಪ್ರಕೃತಿ ಚಿಕಿತ್ಸೆ ಕುರಿತು ನಡೆಸಿದ ಅಧ್ಯಯನ ಸಂಶೋಧನಾ ಪ್ರಬಂಧವನ್ನು ಅನಾವರಣಗೊಳಿಸಿದರು.

ಉಜಿರೆಯ ಉದ್ಯಮಿ ಪ್ರಭಾಕರ ಹೆಗ್ಡೆ ಕಾರ್ಯಕ್ರಮ ಉದ್ಘಾಟಿಸಿ ಶುಭ ಕೋರಿದರು. ಸೌತಡ್ಕ ಶ್ರೀಮಹಾಗಣಪತಿ ಸೇವಾ ಟ್ರಸ್ಟ್‌ನ ಅಧ್ಯಕ್ಷ ಕೃಷ್ಣ ಭಟ್ ಸೇವಾ ಭಾರತಿಯ ವಾರ್ಷಿಕ ವರದಿ ಬಿಡುಗಡೆಗೊಳಿಸಿದರು.

3

## ಜೇನು ಕೃಷಿ ತರಬೇತಿ ಕಾರ್ಯಕ್ರಮ



ಧರ್ಮಸ್ಥಳ: ಸೇವಾಭಾರತಿ ಕನ್ಯಾಡಿ-II ಇದರ ಆಶ್ರಯದಲ್ಲಿ ಎ.ಪಿ.ಡಿ ಬೆಂಗಳೂರು ಇದರ ಸಹಯೋಗದೊಂದಿಗೆ ನ.11ರಂದು ಸೇವಾ ನಿಕೇತನದಲ್ಲಿ ಬೆನ್ನು ಮೂಳೆ ಮುರಿತಗೊಂಡ ವಿಶೇಷ ಚೇತನರ ಕುಟುಂಬದ ಸದಸ್ಯರಿಗೆ ಉಚಿತ ಜೇನು ಕೃಷಿ ಕಾರ್ಯಾಗಾರ ನಡೆಯಿತು. ಸೇವಾ ಭಾರತಿ ಸಲಹಾ ಸಮಿತಿ ಸದಸ್ಯೆ ಮನೋರಮಾ ಭಟ್ ಕಾರ್ಯಾಗಾರವನ್ನು ಉದ್ಘಾಟಿಸಿ, ಜೇನು ಕೃಷಿಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿ, ಆರ್ಥಿಕ ಚಟುವಟಿಕೆಗಳನ್ನು ನಿರ್ವಹಿಸಲು ಸುಸ್ಥಿರತೆ ಮುಖ್ಯ ಹಾಗೆ ಕೆಲಸದಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರು.

ಸೇವಾಧಾಮದ ಸದಸ್ಯ ಅವಿನಾಶ್ ಶೆಟ್ಟಿ ಮಾತನಾಡಿ ವಿಶೇಷ ಚೇತನರು ಸ್ವ-ಉದ್ಯೋಗದ ಮೂಲಕ ಆರ್ಥಿಕ ಸ್ವಾವಲಂಬನೆಗಳಿಸುವಂತಗಬೇಕು ಎಂದರು. ಉರುವಾಲು ಪುತ್ತೂರು ಜೇನು ಕೃಷಿ ಸೇವಾ ಸಹಕಾರಿ ಸಂಘದ ನಿರ್ದೇಶಕ ಶ್ಯಾಮ್ ಭಟ್ ಜೇನು ಕೃಷಿ ಸಾಕಾಣಿಕೆ ಬಗ್ಗೆ ವಿಶೇಷ ಚೇತನರ ಕುಟುಂಬದ ಸದಸ್ಯರಿಗೆ ತರಬೇತಿ ನೀಡಿದರು. ಸೇವಾಭಾರತಿ ಅಧ್ಯಕ್ಷ ಕೆ. ವಿನಾಯಕ ರಾವ್, ಜೇನು ಕೃಷಿಕ ಶಶಿಧರ್ ರಾವ್ ಮತ್ತಿಲ ಉಪಸ್ಥಿತರಿದ್ದರು. ತರಬೇತಿಯಲ್ಲಿ 10 ಜನ ಬೆನ್ನು ಮೂಳೆ ಮುರಿತಗೊಂಡ ವಿಶೇಷ ಚೇತನ ಫಲಾನುಭವಿಗಳು ಹಾಗೂ ಸೇವಾಧಾಮದ ಸಿಬ್ಬಂದಿಗಳಾದ ಮೋಹನ್, ಅಖಿಲೇಶ್ ಎ ಮತ್ತು ನವೀನ್ ಭಾಗವಹಿಸಿದ್ದರು. ಸ್ವಉದ್ಯೋಗ ಕಾರ್ಯಕ್ರಮ ಸಂಯೋಜಕ ರಂಜನ್ ಕುಮಾರ್ ಕಾರ್ಯಕ್ರಮ ನಿರೂಪಿಸಿ, ಧನ್ಯವಾದವಿತ್ತರು.

## ಬೆನ್ನುಮೂಳೆ ಮುರಿತಕ್ಕೊಳಗಾದವರ ಮನವಿಗೆ ಸ್ಪಂದಿಸಿದ ಶಾಸಕ ಹರೀಶ್ ಪೂಂಜಾ



ಧರ್ಮಸ್ಥಳ: ಬೆಳ್ತಂಗಡಿ ತಾಲೂಕಿನಲ್ಲಿ ಬೆನ್ನುಮೂಳೆ ಮುರಿತಕ್ಕೊಳಗಾದ 65 ದಿವ್ಯಾಂಗರ ಮನೆಗಳನ್ನು ಸೇವಾ ಭಾರತಿ ಇದರ ಅಧ್ಯಕ್ಷರಾದ ವಿನಾಯಕ ರಾವ್ ಗುರುತಿಸಿ ಬೆಳ್ತಂಗಡಿ ಶಾಸಕರಿಗೆ ಮನವಿ ನೀಡಿದರು. ಇದಕ್ಕೆ ಸ್ಪಂದಿಸಿದ ಶಾಸಕರು ಸುಮಾರು 1.40 ಲಕ್ಷ ವೆಚ್ಚದಲ್ಲಿ ಔಷಧಿ ಮತ್ತು ದಿನಬಳಕೆಯ ದಿನಸಿ ಕಿಟ್ ಗಳನ್ನು ವಿತರಿಸಲು ಮೇ 30 [illegible] ದಿವ್ಯಾಂಗರಿಗೆ ಸರ್ಕಾರದ ವತಿಯಿಂದ ಎಲ್ಲಾ ಸವಲತ್ತು ಹಾಗೂ ಅಗತ್ಯನೆರವು ಒದಗಿಸಲು ತಾನು ಪ್ರಮಾಣಿಕ ಪ್ರಯತ್ನ ಮಾಡುವುದಾಗಿ ತಿಳಿಸಿದರು. ಇನ್ನೂ ಉಳಿದ ಎಲ್ಲಾ ಮನೆಗಳಿಗೆ 3-4 ದಿನಗಳಲ್ಲಿ ತಲುಪಿಸುವ ಕಾರ್ಯಕ್ಕೆ ಸೇವಾಭಾರತಿ ಕನ್ಯಾಡಿ ಮುಂದಾಗಿದೆ. ಈ ಸಂದರ್ಭದಲ್ಲಿ ಧರ್ಮಸ್ಥಳ ಸಿ.ಎ ಬ್ಯಾಂಕ್ ಅಧ್ಯಕ್ಷರಾದ ಹರಿದಾಸ್ ಗಾಂಭೀರ್ ನಿರ್ದೇಶಕರಾದ

## ಎಲ್.ಐ.ಸಿ ಗೋಲ್ಡನ್ ಜುಬ್ಲಿ ಫೌಂಡೇಶನ್‌ಯಿಂದ ಸೌತಡ್ಕ ಸೇವಾಧಾಮಕ್ಕೆ ಸೋಲಾರ್ ಪವರ್ ಸಿಸ್ಟಮ್ ಕೊಡುಗೆ



ಕೊಕ್ಕಡ :- ಸೇವಾಭಾರತಿಯ ಅಂಗಸಂಸ್ಥೆಯಾದ ಸೌತಡ್ಕ ಸೇವಾಧಾಮದಲ್ಲಿ ಭಾರತೀಯ ಜೀವಾ ವಿಮಾ ನಿಗಮ ಗೋಲ್ಡನ್ ಜುಬ್ಲಿ ಫೌಂಡೇಶನ್ ವತಿಯಿಂದ ಕೊಡುಗೆಯಾಗಿ ನೀಡಿದ ಸೋಲಾರ್ ಪ್ಯಾನಲ್ ಹಾಗೂ ವಾಟರ್ ಹೀಟರ್ ಉದ್ಘಾಟನ ಸಮಾರಂಭ ಜ.13 ರಂದು ನೆರವೇರಿತು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಎಲ್. ಐ. ಸಿ ಯ ರೀಜನಲ್ ಮ್ಯಾನೇಜರ್ ಎಮ್. ಜಗನ್ನಾಥ್ ಮಾತನಾಡಿ, ಫೌಂಡೇಶನ್ [illegible] ಶಂಕರ್ ,ಶ್ರೀ ವಿನಾಯಕ ಸೇವಾ ಟ್ರಸ್ಟ್, ಸೌತಡ್ಕದ ಅಧ್ಯಕ್ಷ ಕೃಷ್ಣಾ ಭಟ್,ಮತ್ತು ಸೇವಾಭಾರತಿಯ ಅಧ್ಯಕ್ಷರು ಹಾಗೂ ಸೇವಾಧಾಮದ ಸಂಸ್ಥಾಪಕರಾದ ಕೆ. ವಿನಾಯಕ ರಾವ್ ಸೇವಾಭಾರತಿಯ ಸೇವಾಕಾರ್ಯ ಬಗ್ಗೆ ವಿವರಿಸುತ್ತಾ ಸೇವಾಧಾಮಕ್ಕೆ ಕೊಡುಗೆಯಾಗಿ ನೀಡಿದ ಸೋಲಾರ್ ಪ್ಯಾನಲ್ ಹಾಗೂ ವಾಟರ್ ಹೀಟರ್‌ಗಳ ಕೊಡುಗೆಯನ್ನು ಪ್ರಶಂಸಿಸುತ್ತಾ ಹಾಗೂ ಇದಕ್ಕೆ ಎಲ್. ಐ. ಸಿ ಸಂಸ್ಥೆಗೆ

## ಭಾರತೀಯ ಸೀನಿಯರ್ ಛೇಂಬರ್‌ನಿಂದ ವಿನಾಯಕ್ ರಾವ್‌ರಿಗೆ ಜವಾಬ್ದಾರಿಯುತ ಕ್ರಿಯಾಶೀಲ ನಾಗರಿಕ ಪ್ರಶಸ್ತಿ ಪ್ರದಾನ



ಭಾರತೀಯ ಸೀನಿಯರ್ ಛೇಂಬರ್‌ನ ಆಶ್ರಯದಲ್ಲಿ 2020ರಲ್ಲಿ ಕೇರಳದ ಚೆಂಗನ್‌ಚೇರಿಯಲ್ಲಿ ಜರಗಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಬೆಳ್ತಂಗಡಿ ಸೀನಿಯರ್ ಛೇಂಬರ್‌ನಿಂದ ಸೂಚಿಸಲ್ಪಟ್ಟ ಕನ್ಯಾಡಿಯ ಸೇವಾಧಾಮದ ವಿನಾಯಕ ರಾವ್‌ರವರು ಭಾರತದ ಜವಾಬ್ದಾರಿಯುತ ಕ್ರಿಯಾಶೀಲ ನಾಗರಿಕ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ವಿನಾಯಕ ರಾವ್‌ರವರಿಗೆ ಕಾರಣಾಂತರಗಳಿಂದ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗದ ಕಾರಣ ಈ ಪ್ರಶಸ್ತಿಯನ್ನು ಅವರ ಸಹೋದರ ಪೃಥ್ವಿರಂಜನ್ ರಾವ್ ಪಡೆದುಕೊಂಡರು. ಜ.26 ರಂದು ಕನ್ಯಾಡಿ ವಿನಾಯಕ್‌ರವರ ನೂತನ ಗೃಹಪ್ರವೇಶದಂದು ಅವರ ಮನೆಯಲ್ಲಿ ಅವರಿಗೆ ಶಾಸಕ ಪ್ರತಾಪ್‌ಸಿಂಹ ನಾಯಕ್ ರವರಿಂದ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ಸಂದರ್ಭದಲ್ಲಿ ಸೀನಿಯರ್ ಜೇಸಿಯ ರಾಷ್ಟ್ರೀಯ ನಿರ್ದೇಶಕ ಪ್ರಮೋದ್ ಆರ್ ನಾಯಕ್, ಮಾಜಿ ಅಧ್ಯಕ್ಷ ಪಿ. ಜೋಯ್, ಅಶೋಕ್ ಕುಮಾರ್ ಬಿ.ಪಿ, ಶ್ರೀಮತಿ ಮೋಲ್ಲಿ ಜೊಯ್ ಸೌತಡ್ಕ ಶ್ರೀ ಗಣಪತಿ ದೇವಸ್ಥಾನದ ಧರ್ಮದರ್ಶಿ ಕೃಷ್ಣ ಭಟ್ಟರು ಉಪಸ್ಥಿತರಿದ್ದರು.

## ಬೆನ್ನುಮೂಳೆ ಮುರಿತಕ್ಕೆ ಒಳಗಾದವರ ಆರೋಗ್ಯ ತಪಾಸಣೆ, ಮಾಹಿತಿ ಶಿಬಿರ

**ಮಲ್ಪೆ ಎ. 2:** ಉಡುಪಿ ಜಿಲ್ಲೆ ಯಲ್ಲಿ ಒಟ್ಟು 60ಕ್ಕೂ ಹೆಚ್ಚಿನ ಬೆನ್ನು ಮೂಳೆ ಮುರಿತಕ್ಕೆ ಒಳಗಾದವರು ನಾಲ್ಕುಗೋಡೆಯ ಮಧ್ಯದಲ್ಲಿ ದುಃಖಕರ ಜೀವನವನ್ನು ನಡೆಸುತ್ತಾ ಇದ್ದಾರೆ, ನಮ್ಮಿಂದ ಏನೂ ಸಾಧ್ಯವಿಲ್ಲ ನಾವು ಮನೆಯವರಿಗೆ, ಸಮಾಜಕ್ಕೆ ಹೊರೆ ಆಗಿದ್ದೇವೆ ಎಂದು ದುಃಖಿಸುತ್ತಿರುವವರಿಗೆ ಸರಿಯಾದ ಮಾಹಿತಿ ನೀಡಿ ಆರೋಗ್ಯ ತಪಾಸಣೆ ಶಿಬಿರಗಳಿಂದ ಪುನಃ ಚೇತನ ಆಗಲು ಸಾಧ್ಯವಿದೆ ಎಂದ ಸೇವಾಧಾಮ ಕನ್ಯಾಡಿ ಬೆನ್ನುಮೂಳೆ ಮುರಿತಕ್ಕೆ ಒಳಗಾದವರ ಪುನಃಶ್ಚೇತನದ ಅಧ್ಯಕ್ಷ ವಿನಾಯಕ್ ರಾವ್ ತಿಳಿಸಿದರು.



ಅವರು ಬೆನ್ನು ಮೂಳೆ ಮುರಿತಕ್ಕೆ ಒಳಗಾದವರ ಆರೋಗ್ಯ ತಪಾಸಣೆ ಮತ್ತು ಮಾಹಿತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಸೇವಾಧಾಮದ ನಿರ್ದೇಶಕ ನಗರಸಭೆಯ ಸದಸ್ಯ ಕೆ. ವಿಜಯ ಕೊಡವೂರು ಮಾತನಾಡಿ ಸೇವಾಧಾಮದಂತಹ ಪುನಃಶ್ಚೇತನ ಮಾಡುವ ಕಾರ್ಯ ಜಿಲ್ಲೆಯಲ್ಲಿ ಆಗಬೇಕಾಗಿದೆ. ದಾನಿಗಳಿಂದ ಮತ್ತು ಸರಕಾರದಿಂದ ಬೇಕಾಗಿರುವ ವ್ಯವಸ್ಥೆ ನೀಡಲು ಪ್ರಯತ್ನಿಸಲಾಗುವುದು ಎಂದರು.

ಸೇವಾಧಾಮದ ನಿರ್ದೇಶಕರಾದ ಉಜ್ವಾಡಿ ಪ್ರಭಾಕರ್ ನಾಯಕ್, ರಾಯನ್ ಫೆರ್ನಾಂಡಿಸ್, ಸಕ್ಷಮ ಉಡುಪಿ ಜಿಲ್ಲಾಧ್ಯಕ್ಷೆ ಲತಾ ಭಟ್, ರೂಪಾಲಕ್ಷ್ಮೀ, ಕೊಡವೂರು ದಿವ್ಯಾಂಗರಕ್ಷಣಾ ಸಮಿತಿಯ ಅಧ್ಯಕ್ಷ ಹರೀಶ್ ಕೊಡವೂರು, ಡಾ। ಶರತ್, ಮನೋರಮ ಉಪಸ್ಥಿತರಿದ್ದರು.




## ನಮ್ಮ ಕಳಕಳಿಯ ಮನವಿ

ಸೇವೆಯೇ ಕಾಯಕವೆಂದು ಸಮಾಜದ ಉನ್ನತಿಯನ್ನು ಬಯಸುವ ಚಿಂತನೆಯು ನಮ್ಮಲ್ಲಿ ಮೂಡಬೇಕು. ಈ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ಕಾರ್ಯೋನ್ಮುಖವಾಗಿರುವ ಸೇವಾಕಾರ್ಯಗಳಿಗೆ ತಮ್ಮಂತಹ ಧನ ದಾನಿಗಳೇ ಆಧಾರಸ್ತಂಭ. ತಮ್ಮ ಆದಾಯದ ಕಿಂಚಿತ್ತನ್ನು ಇಂತಹ ಸಾಮಾಜಿಕ ಕಾರ್ಯಗಳಿಗೆ ಮುಡಿಪಾಗಿಟ್ಟಲ್ಲಿ ನಮ್ಮ ರಾಷ್ಟ್ರವನ್ನು ಸಶಕ್ತ ಮತ್ತು ಸಕ್ಷಮ ರಾಷ್ಟ್ರವನ್ನಾಗಿಸಬಹುದು.

ಈ ಸೇವಾಕಾರ್ಯಕ್ಕೆ ನಮ್ಮೊಂದಿಗೆ ಕೈ ಜೋಡಿಸುವಂತೆ ಈ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ. ಕರವಿನಾಯಿತಿ 80G ಯ ಸೌಲಭ್ಯವೂ ಲಭ್ಯವಿದೆ.

**ವಿಳಾಸ : ಸೇವಾಧಾಮ**
**ಬೆನ್ನುಮೂಳೆ ಮುರಿತಗೊಂಡವರಿಗಾಗಿನ ಪುನಶ್ಚೇತನ ಕೇಂದ್ರ**
**ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಎದುರುಗಡೆ**
**ಕೊಕ್ಕಡ ಗ್ರಾಮ ಬೆಳ್ತಂಗಡಿ ತಾಲೂಕು, ದ.ಕ.– 574 198**
**ಮೊ: 9448254888, 9945491241**
Web site : www.sevaabharathi.org
Email:sevabharathikanyady@gmail.com

**ಬ್ಯಾಂಕ್ ಖಾತೆ ವಿವರ :**
**A/c. No.: 01682200072637**
**IFSC Code: CNRB0010168**
**Canara Bank, Kokkada Branch**